ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-17 ಸಂಚಿಕೆ-10 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ನಾಡಹಬ್ಬ ನವರಾತ್ರಿ







ಶ್ರೀ ಶಾರದಾ ದೇವಸ್ಥಾನ ಕುಂಜಿಬೆಟ್ಟುವಿನಲ್ಲಿ ನವರಾತ್ರಿಯ ಒಂಬತ್ತು ದಿನಗಳು ಹಾಗೂ ಹತ್ತನೆಯ ವಿಜಯದಶಮಿಯು ವಿಶೇಷ ಹಬ್ಬದ ದಿನಗಳು. ಶ್ರೀ ಶಾರದಾ ಮಂಟಪದ ಸ್ಥಾಪನೆಗೆ ವಿಜಯದಶಮಿಯೇ ಮೂಲಕಾರಣ. ಪ್ರತಿವರ್ಷ ವಿಜಯದಶಮಿಯಂದು ಸಂಘದಿಂದ ನಡೆಸಲಾಗುತ್ತಿದ್ದ ಚಂಡಿಕಾಯಾಗಕ್ಕೆ ಹಠಾತ್ತಾಗಿ ಸ್ಥಳ ಸಿಗದಿದ್ದಾಗ ಅದನ್ನೇ ಸವಾಲಾಗಿ ಸ್ವೀಕರಿಸಿ ವರ್ಷ ಕಳೆಯುವುದರೊಳಗೆ ಜಾಗ ಖರೀದಿಸಿ ಶಾರದಾ ಮಂಟಪವನ್ನು ಕಟ್ಟಲಾಯಿತಂತೆ. ಆದುದರಿಂದ ಸಂಘವು ಸಮಾಜಬಾಂಧವರ ಕ್ಷೇಮಾಭಿವೃದ್ಧಿಗಾಗಿ ನಡೆಸುತ್ತಿರುವ ಚಂಡಿಕಾಯಾಗಕ್ಕೆ ಶ್ರೀದೇವಿಯ ಪೂರ್ಣಾನುಗ್ರಹ ಇರುವುದು ಈ ಘಟನೆಯಿಂದ ವೇದ್ಯವಾಗುತ್ತದೆ.

ತಾ.21-09-2017ರಂದು ದೇವಸ್ಥಾನದಲ್ಲಿ ನವರಾತ್ರಿಯ ವಿಶೇಷ ಪೂಜೆಗಳು ಆರಂಭಗೊಂಡವು. ಪ್ರತೀದಿನ ಮಹಿಳಾವೇದಿಕೆಯ ಸದಸ್ಯೆಯರಿಂದ ಭಜನೆ, ಸೌಂದರ್ಯಲಹರಿ, ಲಲಿತಾ ಸಹಸ್ರನಾಮ ಪಾರಾಯಣ ನಡೆಯುತ್ತಿತ್ತು. ಸ್ವಾಧ್ಯಾಯ ತಂಡದವರಿಂದ ವಿವಿಧ ಸೂಕ್ತಗಳ ಪಠಣೆ, ಸಪ್ತಶತೀ ಪಾರಾಯಣ, ಭಕ್ತರಿಂದ ವಿಶೇಷ ಸೇವಾ ಪೂಜೆ ದಿನವಿಡೀ ನಡೆಯುತ್ತಿತ್ತು. ದೇವಸ್ಥಾನ ಹಾಗೂ ಮಂಟಪಕ್ಕೆ ವಿಶೇಷ ದೀಪಾಲಂಕಾರವನ್ನು ಮಾಡಲಾಗಿತ್ತು. ಸಮಾಜಬಾಂಧವರು ಹಾಗೂ ಪರಿಸರದ ಭಕ್ತರು ಪ್ರತೀ ದಿನವೂ ಸಂಜೆ ವಿಶೇಷ ಹೂವಿನ ಪೂಜೆಯನ್ನು ದೇವಿಗೆ ಸಮರ್ಪಿಸಿದರು. ನವರಾತ್ರಿಯ ಶುಭದಿನದಂದು ಅನೇಕರು ದೇವಿಯ ಸಮ್ಮುಖದಲ್ಲಿ ಅಕ್ಷರಾಭ್ಯಾಸ ಮಾಡಿಸಿದರು. ಅಸಂಖ್ಯ ಭಕ್ತರು ಶ್ರೀದೇವಿಗೆ ಸೀರೆ ಹಾಗೂ ಇತರ ಕಾಣಿಕೆಗಳನ್ನು ಸಮರ್ಪಿಸಿದರು. ನವರಾತ್ರಿಯ ದಿನಗಳಲ್ಲಿ ವಿದ್ಯಾಧಿದೇವತೆ ಶ್ರೀ ಶಾರದೆಗೆ ಸೇವಾರೂಪದಲ್ಲಿ ಭಕ್ತರೊಬ್ಬರು ವಿದ್ಯಾನಿಧಿಗೆ ರೂಪಾಯಿ ಒಂದು ಲಕ್ಷವನ್ನು ದೇಣಿಗೆಯಾಗಿ ಸಮರ್ಪಿಸಿದರು. ಇಬ್ಬರು ಭಕ್ತರಿಂದ ಮನೋಭಿಷ್ಟ ಸಿದ್ಧಿಸಿದ್ದಕ್ಕಾಗಿ ಸ್ವರ್ಣಾಭರಣವೂ ಕಾಣಿಕೆಯಾಗಿ ಸಮರ್ಪಿಸಲ್ಪಟ್ಟಿತು. ಹೀಗೆ ಈ ವರ್ಷದ ನವರಾತ್ರಿಯು ಶ್ರೀ ಶಾರದಾದೇವಸ್ಥಾನದಲ್ಲಿ ವಿವಿಧ ರೂಪದಲ್ಲಿ ವಿಶಿಷ್ಟವಾಗಿ ಆಚರಿಸಲ್ಪಟ್ಟುದು ಕಾರ್ಯಕರ್ತರಿಗೆ ಬಹಳ ಸಂತೃಪ್ತಿಯನ್ನು ನೀಡಿತು.

ತಾ.30-9-2017ರಂದು ವಿಜಯದಶಮಿ. ಹಿಂದಿನ ದಿನವೇ ಯುವವೇದಿಕೆಯ ಸಹಕಾರದೊಂದಿಗೆ ಸುಂದರ ಯಾಗಮಂಟಪವನ್ನು ಕಟ್ಟಲಾಗಿತ್ತು. ಅಂದು ಬೆಳಗ್ಗೆ ಸುಮುಹೂರ್ತದಲ್ಲಿ ಯಾಜಿಗಳಾದ ಶ್ರೀ ಜಗದೀಶ ಉಪಾಧ್ಯಾಯರು ಹಾಗೂ ಶ್ರೀ ರವಿ ಉಪಾಧ್ಯಾಯರ ನೇತೃತ್ವದಲ್ಲಿ ದೇವಸ್ಥಾನದಲ್ಲಿ ಸಂಕಲ್ಪ ಪ್ರಾರ್ಥನೆ ನೆರವೇರಿಸಿ ಯಾಗವನ್ನು ಆರಂಭಿಸಲಾಯಿತು. ಶ್ರೀ ಕೊಕ್ರಾಡಿ ಸುರೇಶ ರಾವ್ ಹಾಗೂ ಶ್ರೀಮತಿ ನಾಗವಲ್ಲಿ ದಂಪತಿಗಳು ಯಾಗದ ಕರ್ತೃಗಳಾಗಿ ಸಹಕರಿಸಿದರು. ಸುಮಾರು ನಾಲ್ನೂರಕ್ಕೂ ಹೆಚ್ಚು ಸಮಾಜಬಾಂಧವರ ಸಮ್ಮುಖದಲ್ಲಿ ಹನ್ನೊಂದು ಗಂಟೆಗೆ ಪೂರ್ಣಾಹುತಿ ನೆರವೇರಿತು. ಈ ನಡುವೆ ಮುಖ್ಯ ಸಭಾಮಂಟಪದಲ್ಲಿ ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಯ ಶ್ರೀ ನಿರಂಜನರಾಯರ ಉಸ್ತುವಾರಿಯಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ಜರಗಿದವು. ಶ್ರೀ ಎಸ್.ಎಂ. ರಾವ್ ಹಾಗೂ ಶ್ರೀ ಚಿದಾನಂದ ಶ್ಯಾನುಭಾಗ್ ವಿದ್ಯಾರ್ಥಿ ವೇತನ ಮಳಿಗೆ, ಡಾ.ವೈ ಸುದರ್ಶನರಾವ್ ಸ್ಥಾನಿಕ ಆಪ್‌ನ ಮಳಿಗೆ, ಶ್ರೀ ಪ್ರಕಾಶ ಕುಮಾರ್ ಶ್ರೀ ಶಾರದಾ ಪತ್ರಿಕೆಯ ಮಳಿಗೆ, ಡಾ। ಅಮಿತಾ ಶೋಭಾ ರಾವ್ ಹಾಗೂ ಶ್ರೀ ಸುರೇಶ ಶ್ಯಾನುಭಾಗ್ ನೋಂದಾವಣೆ ಮಳಿಗೆಗಳನ್ನು ನಿರ್ವಹಿಸಿದರು

11.30 ಗಂಟೆಗೆ ಸಭಾ ಕಾರ್ಯಕ್ರಮ ಆರಂಭವಾಯಿತು ಸಂಘದ ಅಧ್ಯಕ್ಷ ಶ್ರೀ ವೈ. ಭುವನೇಂದ್ರ ರಾವ್ ಸಭೆಯ ಅಧ್ಯಕ್ಷರಾಗಿದ್ದರು. ಸಂಘದ ಸ್ಥಾಪಕ ಸದಸ್ಯ ನಿವೃತ್ತ ಅಧ್ಯಾಪಕ ಸಾಹಿತಿ ಶ್ರೀ ಗೋಪಿಚಂದ ರಾವ್ ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಡಾ.ವೈ. ಸುದರ್ಶನರಾವ್ ಸ್ವಾಗತ ಕೋರಿದರು. ಶ್ರೀ ಗೋಪಿಚಂದರಾಯರು ಸಮಾಜಬಾಂಧವರಿಗೆ ಹಿತವಚನಗಳನ್ನು ನುಡಿದರು. ವಿವಿಧ ಸ್ಪರ್ಧೆಯಲ್ಲಿ ವಿಜೇತ ಸ್ಪರ್ಧಾಳುಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪುರಸ್ಕಾರ ನೀಡಲಾಯಿತು. ಬಹುಮಾನವನ್ನು ಪ್ರಾಯೋಜಿಸಿದ ಶ್ರೀ ವೈ. ಭುವನೇಂದ್ರ ರಾವ್ ಮತ್ತು ಶ್ರೀ ವೈ.ಮೋಹನ್ ರಾವ್ ರಂಗವಲ್ಲಿ ಸ್ಪರ್ಧೆಯ ಪ್ರಾಯೋಜಕ ಶ್ರೀ ತಂತ್ರಾಡಿ ಜಗದೀಶರಾವ್ ಹಾಗೂ ದೇವಸ್ಥಾನದ ಅಲಂಕಾರಗಳ ಪ್ರಾಯೋಜಕ ಶ್ರೀ ಮಂಜುನಾಥ ಹೆಬ್ಬಾರ್ ಇವರನ್ನು ಅಭಿನಂದಿಸಲಾಯಿತು. ಶ್ರೀ ದೇವಿಗೆ ಸ್ವರ್ಣಾಭರಣಗಳನ್ನು ಕಾಣಿಕೆಯಾಗಿತ್ತ ಶ್ರೀ ಮೋಹನ್ ದೇವ್ ದಂಪತಿಗಳು, ಡಾ.ವೈ ಸುದರ್ಶನ್ ರಾವ್ ದಂಪತಿಗಳು ಹಾಗೂ ಶ್ರೀ ವೈ.ಮುರಳೀಧರ್ ರಾವ್ ದಂಪತಿಗಳನ್ನು ಅಧ್ಯಕ್ಷರು ಗೌರವಿಸಿದರು. ವಿದ್ಯಾರ್ಥಿವೇತನ ನಿಧಿಗೆ ಕಾಣಿಕೆಯಿತ್ತ ಶ್ರೀ ಗೋವಿಂದ ರಾವ್ ಹಾಗೂ ಶ್ರೀ ಬಾಲಕೃಷ್ಣರವರ ಔದಾರ್ಯವನ್ನು ಸ್ಮರಿಸಲಾಯಿತು. ಪ್ರಭಾರ ಕೋಶಾಧಿಕಾರಿ ಶ್ರೀ ಐ.ಕೆ.ಜಯಚಂದ್ರ ಧನ್ಯವಾದವಿತ್ತರು. ಕಾರ್ಯದರ್ಶಿ ಶ್ರೀ ಕೆ. ಸುರೇಶ ರಾವ್ ಉಪಸ್ಥಿತರಿದ್ದರು. ಸಂಜೆ ನಾಲ್ಕು ಗಂಟೆಗೆ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ "ಶನೀಶ್ವರ ಮಹಾತ್ಮೆ" ಎಂಬ ಯಕ್ಷಗಾನ ಪ್ರದರ್ಶನ ನಡೆಯಿತು. ತಾ.28 ಮತ್ತು 29ರಂದು ಕೂಡಾ ಇದೇ ತಂಡದವರಿಂದ ಯಕ್ಷಗಾನ ಕಾರ್ಯಕ್ರಮ ನಡೆಯಿತು.

**ನವರಾತ್ರಿ ಹಾಗೂ ವಿಜಯದಶಮಿ ಹಬ್ಬದ ಯಶಸ್ಸಿಗೆ ಕಾರಣರಾದ ಎಲ್ಲಾ ಕಾರ್ಯಕರ್ತರಿಗೆ, ಭಕ್ತರಿಗೆ, ದಾನಿಗಳಿಗೆ, ಮತ್ತು ಸಮಾಜಬಾಂಧವರಿಗೆ ಆಡಳಿತ ಮಂಡಳಿಯು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸಿರುತ್ತದೆ.**

## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಮೂಡುಬಿದಿರೆ ಆಟಿದ ಕೂಟ-ಮಹಾಸಭೆ



ತಾ.13-08-2017ನೇ ರವಿವಾರ ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಕಡಲಕೆರೆ ಸಂತ ಇಗ್ನೇಶಿಯಸ್ ಹಿರಿಯ ಪ್ರಾಥಮಿಕ ಶಾಲಾ ವಠಾರದಲ್ಲಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ.ಚಂದ್ರಶೇಖರ ರಾಯರ ನೇತೃತ್ವದಲ್ಲಿ ಆಟಿದ ಕೂಟವು ಸಡಗರ ಸಂಭ್ರಮದಿಂದ ನಡೆಯಿತು. ಬೆಳಗ್ಗಿನ ಉಪಾಹಾರದ ನಂತರ, ಶ್ರೀ ಜಯರಾಮ ರಾಯರ ಮುಂದಾಳತ್ವದಲ್ಲಿ ಮಹಿಳೆಯರಿಗೆ ಮಹನೀಯರಿಗೆ ಮತ್ತು ಮಕ್ಕಳಿಗೆ ವಿವಿಧ ಆಟೋಟ ಸ್ಪರ್ಧೆಗಳು ನಡೆಯಿತು. ಬೆಳಿಗ್ಗೆ 11.30ಕ್ಕೆ ಪರಿಷತ್ತಿನ ಮಕ್ಕಳು ಮತ್ತು ಯುವಕ ಯುವತಿಯರಿಂದ "ಸುದರ್ಶನ ವಿಜಯ" ಎಂಬ ಯಕ್ಷಗಾನ ಬಯಲಾಟವು ಶ್ರೀ ದೇವಾನಂದ ಭಟ್‌ರವರ ನಿರ್ದೇಶನದಲ್ಲಿ ನಡೆದು ಜನರ ಮನಸೂರೆಗೊಂಡಿತು.

(3ನೇ ಪುಟಕ್ಕೆ...)

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ದೇವಸ್ಥಾನಗಳು ಹಿಂದು ಸಂಸ್ಕೃತಿಯ ಚಟುವಟಿಕೆಯ ಕೇಂದ್ರಗಳು. ಒಂದು ಕಾಲದಲ್ಲಿ ಅಧಿಕಾರದ ಕೇಂದ್ರಗಳೂ ಆಗಿದ್ದವು. ಇಡೀ ಗ್ರಾಮದ ದಿನನಿತ್ಯದ ವ್ಯವಹಾರಗಳೂ ಆ ಗ್ರಾಮದ ದೇವಸ್ಥಾನದ ಸುತ್ತ ನಡೆಯುತ್ತಿತ್ತೆಂದರೆ ಅತಿಶಯೋಕ್ತಿಯಲ್ಲ. ಅನೇಕ ಶಿಲಾಶಾಸನಗಳು ದೊರಕಿರುವುದು ದೇವಸ್ಥಾನಗಳ ಆಸುಪಾಸಿನಲ್ಲೇ. ಹಾಗಿರುವಾಗ ಸ್ಥಾನಿಕರ ಅಧೀನದಲ್ಲಿರುವ ದೇವಸ್ಥಾನಗಳ ಅಧ್ಯಯನವು ಸ್ಥಾನಿಕರ ಇತಿಹಾಸದ ಅಧ್ಯಯನಕ್ಕೇ ಸಮ. ನಮ್ಮವರ ಅಧೀನದಲ್ಲಿ ಸಾವಿರ ವರ್ಷಗಳಷ್ಟು ಹಳೆಯ ದೇವಸ್ಥಾನಗಳು, ಹೆಸರಾಂತ ದೇವಾಲಯಗಳೂ ಗ್ರಾಮದೇವಾಲಯಗಳು ಇನ್ನೂ ಇದ್ದಾವೆನ್ನುವುದು ಹೆಮ್ಮೆಯ ವಿಷಯ ಮಾತ್ರವಲ್ಲ ಸ್ಥಾನಿಕರಿಗೆ ಹಿಂದಿನ ಶತಮಾನಗಳಲ್ಲಿ ಇದ್ದ ಗೌರವ ಹಾಗೂ ಪ್ರಾಧಾನ್ಯತೆಗಳಿಗೆ ಸಾಕ್ಷಿಗಳಾಗಿವೆ. ಈ ಹಿನ್ನೆಲೆಯಲ್ಲಿ ಶ್ರೀ ಶಾರದಾ ಪತ್ರಿಕೆಯಲ್ಲಿ ನಮ್ಮ ಆಡಳಿತ, ಅರ್ಚಕತನದಲ್ಲಿರುವ ದೇವಸ್ಥಾನಗಳ ಮಾಹಿತಿ ಸಂಗ್ರಹಿಸಿ ಪ್ರಕಟಿಸಲು ಆರಂಭಿಸಿದೆವು. ಹಿಂದಿನ ಸಮಾವೇಶದಲ್ಲಿ ಕಡಬ ಗೋಪಾಲರಾಯರು ನಮ್ಮವರ ದೇವಸ್ಥಾನಗಳ ಪಟ್ಟಿಯನ್ನು ತಯಾರಿಸಿ ಇಟ್ಟಿದ್ದರು. ಅದನ್ನು ಆಧಾರವಾಗಿಟ್ಟುಕೊಂಡು ಲೇಖನಗಳನ್ನು ಪ್ರಕಟಿಸುತ್ತಿದಂತೆ ಇನ್ನೂ ಕೆಲವು ದೇವಸ್ಥಾನಗಳು ನಮ್ಮವರ ಅಧೀನದಲ್ಲಿರುವುದು ತಿಳಿದು ಬಂತು. ಇನ್ನೂ ಅನೇಕ ದೇವಸ್ಥಾನಗಳು ಇದೇ ರೀತಿ ನಮ್ಮವರ ಆಡಳಿತದಲ್ಲಿ ಇರಬಹುದು. ಕಡಬ ಗೋಪಾಲರಾಯರ ಸ್ತುತ್ಯಾರ್ಹ ಕೆಲಸಕ್ಕೆ ಅಭಿನಂದನೆಗಳು.

ಇಲ್ಲಿಯ ತನಕ ನಾವು ಶ್ರೀ ಶಾರದಾ ಪತ್ರಿಕೆಯಲ್ಲಿ ಒಟ್ಟು 26 ದೇವಸ್ಥಾನಗಳ ಬಗ್ಗೆ ಮಾಹಿತಿ ಪ್ರಕಟಿಸಿದ್ದೇವೆ. ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಬದೆಂಜ, ಶ್ರೀ ತ್ರಿಶೂಲಿನಿ ದೇವಸ್ಥಾನ ಬಳ್ಪ, ಶ್ರೀ ಚೆನ್ನಕೇಶವ ದೇವಸ್ಥಾನ ಸುಳ್ಯ, ಶ್ರೀ ಸೊಮನಾಥ ದೇವಸ್ಥಾನ ಚಿರುಗೋಳಿ, ಶ್ರೀ ಭದ್ರಕಾಳಿ ದೇವಸ್ಥಾನ ಬೆಳ್ತಂಗಡಿ, ಶ್ರೀ ಜ್ಞಾನಶಕ್ತಿ ದೇವಸ್ಥಾನ ಬೆಂಗಳೂರು, ಶ್ರೀ ಶಾರದಾ ದೇವಸ್ಥಾನ ಕುಂಜಿಬೆಟ್ಟು, ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಬಟ್ರಪಾಡಿ, ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ ಮುಂಡ್ಕೂರು, ಶ್ರೀ ಗೋಪಾಲಕೃಷ್ಣ ದೇವಸ್ಥಾನ ಕುತ್ಯಾಳ, ಶ್ರೀ ಸದಾಶಿವ ದೇವಸ್ಥಾನ ಶಿವಮಂಗಲ, ಶ್ರೀ ಮಹಾವಿಷ್ಣು ದೇವಸ್ಥಾನ ವಿಷ್ಣುಮಂಗಲ, ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಪಾವಂಜೆ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಕುಚ್ಚೂರು ಕಬ್ಬಿನಾಲೆ, ಶ್ರೀ ಸದಾಶಿವ ದೇವಸ್ಥಾನ ಅಮುಂಜೆ, ಶ್ರೀ ಜನಾರ್ಧನ ದೇವಸ್ಥಾನ ಅಮುಂಜೆ, ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕಾಂತಮಂಗಲ, ನಾಲೂರು ಶ್ರೀ ಶಂಕರ ನಾರಾಯಣ ದೇವಸ್ಥಾನ ಕಡಬ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು, ಶ್ರೀ ಕ್ಷೇತ್ರ ಉದಯಾದ್ರಿ ಪಡುಬಿದ್ರಿ, ಶ್ರೀ ಶ್ರೀನಿವಾಸ ದೇವಸ್ಥಾನ ತಲೇಖಿ, ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ ಬಾರ್ಕೂರು, ಶ್ರೀ ರಾಜರಾಜೇಶ್ವರೀ ದೇವಸ್ಥಾನ ಮಠಂತಬೆಟ್ಟು, ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕೊಕ್ರಾಡಿ, ಶ್ರೀ ಸದಾಶಿವ ದೇವಸ್ಥಾನ ಕೂಡಬೆಟ್ಟು, ಶ್ರೀ ಶ್ರೀಕಂಠಸ್ವಾಮೀ ದೇವಸ್ಥಾನ ಕಡಬ ಇಷ್ಟು ದೇವಸ್ಥಾನಗಳ ಇತಿಹಾಸ–ಕಾರಣಿಕ–ನಡೆಯುವ ಸೇವೆಗಳ ವಿವರ, ಆಡಳಿತ–ಅರ್ಚಕ– ತಂತ್ರಿಗಳ ವಿವರ, ಹೋಗುವ ದಾರಿ ಹಾಗೂ ಸಂಪರ್ಕ ಸಂಖ್ಯೆಯ ವಿವರಗಳನ್ನು ಪ್ರಕಟಿಸಿದ್ದೇವೆ. ಈ ಲೇಖನಗಳನ್ನು ಒಂದುಗೂಡಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿ ದಾಖಲಿಸುವ ಉದ್ದೇಶವಿರುವುದರಿಂದ ನಮ್ಮವರ ದೇವಸ್ಥಾನಗಳು ಇನ್ನೂ ಇದ್ದಲ್ಲಿ ಅವುಗಳ ಬಗ್ಗೆ ಮಾಹಿತಿಯನ್ನು ನನ್ನ ಫೋನ್ ಸಂಖ್ಯೆ 9845136322 ಗೆ ನೀಡಬೇಕಾಗಿ ವಿನಂತಿ


### ಸಂಪಾದಕ ಮಂಡಳಿ

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ


**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ದೀಪಾವಳಿ ಹಬ್ಬದ ಶುಭಾಶಯಗಳು**

## ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ–26

# ಬದೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಪುತ್ತೂರು ತಾಲೂಕು





ಈ ದೇವಾಲಯ ಪುತ್ತೂರು ತಾಲೂಕಿನ ರಾಮಕುಂಜ ಗ್ರಾಮದ ಬದೆಂಜ ಎಂಬಲ್ಲಿ ಸುಮಾರು 700–800 ವರ್ಷಗಳ ಹಿಂದಿನ ಕಾಲದ್ದೆಂದು ಊಹಿಸಲಾಗಿದೆ. ಸುಮಾರು 500 ವರ್ಷಗಳ ಇತಿಹಾಸವಿರುವ ಕುಂಭಾಟ್ ಮನೆತನದ ಸ್ವಾಧೀನದಲ್ಲಿದೆ. ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಶಿಲಾಬಿಂಬ ಬಹಳ ಸುಂದರವಾಗಿದ್ದು ಆಕರ್ಷಕವಾಗಿದೆ. ಗರ್ಭಗುಡಿ ವೃತ್ತಾಕಾರದಲ್ಲಿದೆ. ಚಾಲುಕ್ಯ ಶಿಲ್ಪ ಶೈಲಿಯಲ್ಲಿ ಕಟ್ಟಿಸಲಾಗಿದೆ ಎಂದು ತಿಳಿದು ಬರುತ್ತದೆ. ಹಾಗೂ ಶಿವಪ್ಪ ನಾಯಕನ ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿ ಇತ್ತೆಂದು ಹೇಳುತ್ತಾರೆ. ಆ ಕಾಲದಲ್ಲಿ ಈ ದೇವಾಲಯಕ್ಕೆ ಅಂದಾಜು 150 ಎಕ್ರೆ ಜಮೀನು ಇತ್ತು.

ವಾಹನ ಸಂಚಾರವೇ ಇಲ್ಲದ ಕಾಲದಲ್ಲಿ ಈ ಭಾಗದ ಜನರು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹರಕೆ ಸಲ್ಲಿಸಲು ಸುಮಾರು 60 ಕಿ.ಮೀ ನಡೆದುಕೊಂಡೇ ಹೋಗಬೇಕಾಗಿತ್ತು. ಆದುದರಿಂದ ಈ ಭಾಗದ ಜನರು ಬದೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗಿ ಹರಕೆ ಸಲ್ಲಿಸುತ್ತಿದ್ದರಂತೆ. ಯಾವುದೇ ಹರಕೆ ಹೇಳಿದರೆ ಶೀಘ್ರವಾಗಿ ಫಲ ಸಿಗುವುದೆಂಬ ವಿಶ್ವಾಸ ಜನರಲ್ಲಿದೆ. ಇಲ್ಲಿಯ ಪ್ರಧಾನ ಹರಕೆ ಎಂದರೆ ರಂಗಪೂಜೆ ಮತ್ತು ಹಾಲು ಪಾಯಸ ಸೇವೆ.

ದಾರಿ : ಮಂಗಳೂರು–ಉಪ್ಪಿನಂಗಡಿ–ಸುಬ್ರಹ್ಮಣ್ಯ ದಾರಿಯಲ್ಲಿ ಕ್ಯೊಲ ಕೆಟ್ಲ್ ಫಾರ್ಮ್ ಇದೆ. ಅಲ್ಲಿಂದ 3. ಕಿ.ಮೀ ಒಳಭಾಗದಲ್ಲಿ ಈ ದೇವಾಲಯವಿದೆ. ಪಾಳು ಬಿದ್ದಿದ್ದ ಈ ದೇವಸ್ಥಾನವನ್ನು ಬೊಂಬಾಯಿಯಲ್ಲಿ ವಾಸಿಸುತ್ತಿರುವ ಕುಂಭಾಟ್ ರಘುರಾಮ ರಾವ್ ಮತ್ತು ಕುಂಭಾಟ್ ಜಗನ್ನಾಥರಾವ್ ಇವರ ನೇತೃತ್ವದಲ್ಲಿ ಜೀರ್ಣೋದ್ಧಾರಗೊಳಿಸಲಾಯಿತು. 2010ರಲ್ಲಿ ಕೆ. ಗೋಪಾಲರಾವ್ ಇವರ ಅಧ್ಯಕ್ಷತೆಯಲ್ಲಿ ಬ್ರಹ್ಮಕಲಶ ನೆರವೇರಿಸಲಾಗಿದೆ.

ಈ ದೇವಸ್ಥಾನದಲ್ಲಿ ವಾರ್ಷಿಕವಾಗಿ ಷಷ್ಠಿ, ಕಿರುಷಷ್ಠಿ ಮತ್ತು ವಾರ್ಷಿಕೋತ್ಸವ ನಡೆಯುತ್ತದೆ. ದೇವಸ್ಥಾನದ ದಿನನಿತ್ಯದ ವ್ಯವಹಾರ ಹಾಗೂ ಅರ್ಚಕತನವನ್ನು ನಿರಂಜನ ಶರ್ಮ ನಿರ್ವಹಿಸುತ್ತಿದ್ದಾರೆ. ಕ್ಯೊಲ ಲಕ್ಷ್ಮೀ ನಾರಾಯಣ ರಾವ್ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿ ಇದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ನಿರಂಜನ ಶರ್ಮ 9483212193 ಇವರನ್ನು ಸಂಪರ್ಕಿಸಬಹುದು.


*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging




## ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**“ಗೃಹ ಸಾಲ”**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010–11 ರಿಂದ 2015–16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಳಕ್ಕೆ ಜನರೇಟರ್ ಸೌಲಭ್ಯ



ಸುಮಾರು 800 ವರ್ಷಗಳ ಇತಿಹಾಸವುಳ್ಳ ಪಡುಬಿದ್ರಿ-ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಸ್ಥಾನಿಕ ಸಮಾಜದ ಕೊಡುಗೈ ದಾನಿಯೊಬ್ಬರು ಸುಮಾರು ರೂ 1,75,000/- ಮೌಲ್ಯದ 5 ಕಿಲೋವ್ಯಾಟ್ ಸಾಮರ್ಥ್ಯದ ಜನರೇಟರನ್ನು ಕೊಡುಗೆಯಾಗಿ ನೀಡಿರುತ್ತಾರೆ. ಸಮಾಜ ಬಾಂಧವರು ಹಾಗೂ ಭಕ್ತಾಭಿಮಾನಿಗಳು ಇವರ ಕೊಡುಗೆಯನ್ನು ತುಂಬುಹೃದಯದಿಂದ ಪ್ರಶಂಸಿಸಿದ್ದು, ದೇವರು ಇವರಿಗೆ ಸಕಲ ಸೌಭಾಗ್ಯಗಳನ್ನು ಹಾಗೂ ಆರೋಗ್ಯವನ್ನು ನೀಡಲೆಂದು ಪ್ರಾರ್ಥಿಸಿದ್ದಾರೆ. ಇದೇ ಸಂದರ್ಭದಲ್ಲಿ ದೇವಳದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಬಿ. ಜಯರಾಮ ರಾವ್ ಇವರು ಅಭಿವೃದ್ಧಿ ಪಥದತ್ತ ಸಾಗುತ್ತಿರುವ ಶ್ರೀ ವಿಷ್ಣುಮೂರ್ತಿ ದೇವಳದ ಕೆಲಸ ಕಾರ್ಯಗಳಲ್ಲಿ ಇದೊಂದು ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ ಹಾಗೂ ಸಮಾಜ ಬಾಂಧವರು ಇಂತಹ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿ ಎಂದು ಆಶಿಸಿದ್ದಾರೆ.

## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.) ಮೂಡುಬಿದಿರೆ ಆಟಿದ ಕೂಟ-ಮಹಾಸಭೆ

...1ನೇ ಪುಟದಿಂದ

ಮಧ್ಯಾಹ್ನ ಭೋಜನದ ನಂತರ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ 27ನೇ ಮಹಾಸಭೆಯು ನಡೆಯಿತು. ಅಧ್ಯಕ್ಷರು ದೀಪ ಪ್ರಜ್ವಲಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಶ್ರೀಮತಿ ವೃಂದಾ, ಶ್ರೀಮತಿ ವೀಣಾ, ಶ್ರೀಮತಿ ಕವಿತಾ, ಶ್ರೀಮತಿ ಉಷಾ ರಾಜೇಶ್ವರೀ ಇವರ ಪ್ರಾರ್ಥನೆಯೊಂದಿಗೆ ಸಮಾರಂಭವು ಪ್ರಾರಂಭಗೊಂಡಿತು. ವರದಿ ವರ್ಷದಲ್ಲಿ ಅಗಲಿದ ಊರ ಸಮಾಜ ಬಾಂಧವರಿಗೆ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಪರಿಷತ್ತಿನ ವರದಿಯನ್ನು ಕಾರ್ಯದರ್ಶಿ ಶ್ರೀ ಯಂ. ಜಗದೀಶ ರಾವ್ ರವರೂ, ಆಯವ್ಯಯವನ್ನು ಕೋಶಾಧಿಕಾರಿ ಶ್ರೀ ವಾದಿರಾಜ ರಾವ್‌ರವರೂ ಮಂಡಿಸಿದರು ಮತ್ತು ಸದಸ್ಯರಿಂದ ಅನುಮೋದನೆಯನ್ನು ಪಡೆಯಲಾಯಿತು.

ಸಮಾಜದ ಹಿರಿಯ ಶ್ರೀ ವಾಲ್ಪಾಡಿ ಈಶ್ವರಪ್ಪಯ್ಯ ಶ್ಯಾನುಭೋಗ್ ಇವರನ್ನು ಅಧ್ಯಕ್ಷರು ಹಾಗೂ ಅತಿಥಿಗಳು, ಗೌರವಾಧ್ಯಕ್ಷರು ಹಾರ ಹಾಕಿ ಶಾಲು ಹೊದಿಸಿ, ಸ್ಮರಣಿಕೆ, ಹಣ್ಣು ಹಂಪಲು ಸನ್ಮಾನ ಪತ್ರವನ್ನು ನೀಡಿ ಸನ್ಮಾನಿಸಿದರು. ಮಂಗಳೂರಿನ ನಿವೃತ್ತ ತಹಶೀಲ್ದಾರ್ ಶ್ರೀ ಕೆ.ಮೋಹನ ರಾಯರು ಮತ್ತು ಸಂತ ಇಗ್ನೇಶಿಯಸ್ ಹಿರಿಯ ಪ್ರಾಥಮಿಕ ಶಾಲೆಯ ಸಂಚಾಲಕರಾದ ಪ್ರೋ.ಶ್ರೀ ವಾಸುದೇವ ಭಟ್ ಆಗಮಿಸಿದ್ದರು. ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕ ಗಳಿಸಿದ ಚಿ। ಆದರ್ಶ್ ವಿ.ರಾವ್ ಇವರಿಗೆ ಸ್ಮರಣಿಕೆ, ಹಣ್ಣು ಹಂಪಲು, ನಗದು ನೀಡಿ ಗೌರವಿಸಲಾಯಿತು. ಸನ್ಮಾನ ಪತ್ರವನ್ನು ಶ್ರೀಮತಿ ಜ್ಯೋತಿ ಕೆ. ವಾಚಿಸಿದರು. ಮಹಾ ಪೋಷಕ ಸದಸ್ಯರಾಗಿ ಸೇರ್ಪಡೆಗೊಂಡ ಶ್ರೀ ಯೋಗೀಶ ರಾವ್ ಲಾಡಿ ಇವರನ್ನು ಅಧ್ಯಕ್ಷರು ಶಾಲು ಹಾಕಿ ಗೌರವಿಸಿದರು. ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ನೀಡಲಾಯಿತು. ಪರಿಷತ್ತಿನ ಮಕ್ಕಳಿಗೆ ಯಕ್ಷಗಾನ ತರಬೇತಿಯನ್ನು ನೀಡಿದ ಯಕ್ಷ ಪ್ರೇಮಿ ಶ್ರೀ ದೇವಾನಂದ ಭಟ್ ಮತ್ತು ವೇಷ ಭೂಷಣವನ್ನು ಉಚಿತವಾಗಿ ಒದಗಿಸಿದ ಸಂತೋಷ ಕಲಾ ಆರ್ಟ್‌ನ ಮಾಲಕ ಶ್ರೀ ಜಗನ್ನಾಥ ರಾವ್ ಇವರನ್ನು ಶಾಲು ಹಾಕಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ ರಾಯರು ಶೃಂಗೇರಿ ಶ್ರೀ ಶ್ರೀ ಜಗದ್ಗುರುಗಳು ಮೂಡುಬಿದ್ರೆಗೆ ಆಗಮಿಸಿದ ಸಮಯದಲ್ಲಿ ತನುಮನಧನಗಳಿಂದ ಸಹಕರಿಸಿದ ಸಮಾಜ ಬಾಂಧವರನ್ನು ಸ್ಮರಿಸುತ್ತಾ ಮುಂದೆಯೂ ಸಹಕಾರವನ್ನು ನೀಡಬೇಕೆಂದು ಮನವಿ ಮಾಡಿದರು. ವೇದಿಕೆಯಲ್ಲಿ ಕಾರ್ಯಾಧ್ಯಕ್ಷ ಶ್ರೀ ಬಿ. ಚಂದ್ರಶೇಖರ ರಾವ್, ಶ್ರೀ ಕೆ. ಮೋಹನ ರಾವ್ ಬಿ.ಸಿ ರೋಡ್, ಗೌರವಾಧ್ಯಕ್ಷ ಶ್ರೀ ಬಿ.ಕೃಷ್ಣ ರಾವ್, ಕಾರ್ಯದರ್ಶಿ ಯಂ. ಜಗದೀಶ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ವೀಣಾ ಡಿ.ಭಟ್ ಉಪಸ್ಥಿತರಿದ್ದರು. ಶ್ರೀ ಜಯರಾಮ ರಾವ್ ಗಣ್ಯರನ್ನು ಸ್ವಾಗತಿಸಿದರೆ ಬಿ. ಸಂತೋಷ ರಾವ್ ವಂದನಾರ್ಪಣೆಗೈದರು. ಚುನಾವಣಾಧಿಕಾರಿಯಾಗಿ ಶ್ರೀ ಕೆ. ಮೋಹನ ರಾಯರು ಸಹಾಯಕರಾಗಿ ಶ್ರೀ ಅನಾರು ಕೃಷ್ಣಶರ್ಮ ಸಹಕರಿಸಿದರು. ನಂತರ ಪರಿಷತ್ತಿನ ಸದಸ್ಯರಿಂದ ನೃತ್ಯ ನಾಟಕ, ಮೊದಲಾದ ಮನೋರಂಜನಾ ಕಾರ್ಯಕ್ರಮಗಳು ಜರಗಿತು.

ವರದಿ : ಯಂ.ಜಗದೀಶ ರಾವ್

## ವಿಜಯದಶಮಿಯಂದು ನಡೆದ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರು




**ಭಕ್ತಿಗೀತೆ (4ನೇ ತರಗತಿಯ ತನಕ)**
ಪ್ರಥಮ : ಸಂಕಲ್ಪ ಕುಮಾರ, ದ್ವಿತೀಯ : ನಿಹಾರಿಕಾ, ತೃತೀಯ : ಅದ್ವಿತ್ ಹೆಬ್ಬಾರ್.

**ಭಕ್ತಿ ಗೀತೆ (5ರಿಂದ 7ನೇ ತರಗತಿಯ ತನಕ)**
ಪ್ರಥಮ : ದ್ರುಪದ್, ದ್ವಿತೀಯ : ಶರಣ್ಯ ಹೆಜಮಾಡಿ, ತೃತೀಯ : ಭುವನ್ ರಾವ್

**ಭಕ್ತಿ ಗೀತೆ (8ರಿಂದ ಪಿಯುಸಿಯ ತನಕ)**
ಪ್ರಥಮ : ಶ್ರಾವ್ಯ ರಾವ್, ದ್ವಿತೀಯ : ಅಕ್ಷತಾ ರಾವ್, ತೃತೀಯ : ಗೌತಮಿ ರಾವ್

**ಡ್ರಾಯಿಂಗ್ (4ನೇ ತರಗತಿಯವರಿಗೆ)**
ಪ್ರಥಮ : ಸಂಕಲ್ಪ ಕುಮಾರ್, ದ್ವಿತೀಯ : ಅತಿಕ್, ತೃತೀಯ : ಅದ್ವಿತ್ ಹೆಬ್ಬಾರ್.

**ಡ್ರಾಯಿಂಗ್ (5 ರಿಂದ 7ನೇ ತರಗತಿಯವರಿಗೆ)**
ಪ್ರಥಮ : ಅದಿತಿ, ದ್ವಿತೀಯ : ಮಯೂರ್ ರಾವ್, ತೃತೀಯ : ಸ್ಕಂದ ರಾವ್

**ಡ್ರಾಯಿಂಗ್ (8ರಿಂದ ಪಿಯುಸಿಯವರಿಗೆ)**
ಪ್ರಥಮ : ಆದಿತ್ಯ ರಾವ್, ದ್ವಿತೀಯ : ಶ್ರಾವ್ಯ ರಾವ್, ತೃತೀಯ : ಶರಧಿ

**ರಂಗೋಲಿ (4ನೇ ತರಗತಿಯವರಿಗೆ)**
ಪ್ರಥಮ : ಅದ್ವಿತ್ ಹೆಬ್ಬಾರ

**ರಂಗೋಲಿ (5ರಿಂದ 7ನೇ ತರಗತಿಯವರಿಗೆ)**
ಪ್ರಥಮ : ಅದಿತಿ ಕಾರ್ಕಳ, ದ್ವಿತೀಯ : ಸ್ಕಂದ ರಾವ್

**ರಂಗೋಲಿ (8ರಿಂದ ಪಿಯುಸಿಯವರಿಗೆ)**
ಪ್ರಥಮ : ಅಪೂರ್ವ ರಾವ್, ದ್ವಿತೀಯ : ರಕ್ಷಿತ್ ರಾವ್, ತೃತೀಯ : ಅಕ್ಷತಾ ಹೆಬ್ಬಾರ್

### ಉದಯಚಂದ್ರ ಪುರಸ್ಕಾರ

**ಎಸ್‌ಎಸ್‌ಎಲ್‌ಸಿ :**
ರೋಹನ್ ರಾವ್ ಹೆಚ್.ಜೆ. ಉಪ್ಪುಂದ; ಹೆಚ್.ಜಗದೀಶ ರಾವ್ ಉಪ್ಪುಂದ ಇವರ ಪುತ್ರ

**ಪಿಯುಸಿ ವಿಜ್ಞಾನ :**
ದೀಕ್ಷಾ ಎಮ್.ಎಸ್. ಉಜಿರೆ; ಎಮ್. ಶಾಮರಾವ್ ಉಜಿರೆ ಇವರ ಪುತ್ರಿ

**ಪಿಯುಸಿ ವಾಣಿಜ್ಯ :**
ರಶ್ಮಿ ಪಡುಬಿದ್ರಿ; ರಾಜೇಂದ್ರ ರಾವ್ ಪಡುಬಿದ್ರಿ ಇವರ ಪುತ್ರಿ


Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com


ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಸ್ವ-ಅಭಿವೃದ್ಧಿ (ಸಾಮಾಜಿಕ ಉಪಯುಕ್ತ ವಸ್ತುಗಳ ತಯಾರಿಕೆ ಕೈಪಿಡಿ)

- ವೈ. ಮೋಹನ ರಾವ್


ಶ್ರೀಮತಿ ಶರಾವತಿ ರವಿರಾಜ್ ಇವರು ಉಡುಪಿ ಜಿಲ್ಲೆಯ ಪಣಿಯೂರಿನಲ್ಲಿ ಶಾಲಾ ಶಿಕ್ಷಕಿಯಾಗಿದ್ದು, ಈಗ ಎಲ್ಲೂರಿನ 'ಎಸ್.ವಿ.ಎಸ್.ಹಿ.ಪ್ರಾ.ಶಾಲೆ'ಯಲ್ಲಿ ಮುಖ್ಯ ಶಿಕ್ಷಕಿಯಾಗಿದ್ದಾರೆ. ನಮ್ಮ ಸಮಾಜದ ಕೆಲವೇ ಕೆಲವು ಮಹಿಳಾ ಸಾಹಿತಿಗಳಲ್ಲಿ ಇವರು ಒಬ್ಬರು. ಇವರ ಈ ಕೃತಿ 'ಸ್ವ-ಅಭಿವೃದ್ಧಿ' 2016ರಲ್ಲಿ ಯಶಸ್ವಿ 5ನೇ ಮುದ್ರಣ ಕಂಡಿದೆ. ಈ ಪುಸ್ತಕದಲ್ಲಿ ಸುಮಾರು 50 ಸಾಮಾಜಿಕ ಉಪಯುಕ್ತ ವಸ್ತುಗಳ ತಯಾರಿಕೆಯ ಬಗ್ಗೆ ಸಾಹಿತ್ಯವನ್ನು ಒದಗಿಸಲಾಗಿದೆ. ಪ್ರತಿ ಉಪಯುಕ್ತ ವಸ್ತುವಿನ ತಯಾರಿಕೆಗೆ ಬೇಕಾದ ಸಾಮಗ್ರಿಗಳು ಹಾಗೂ ತಯಾರಿಸುವ ವಿಧಾನವನ್ನು ಈ ಪುಸ್ತಕ ಸೂಚಿಸುತ್ತದೆ. 50 ಗೃಹೋಪಯೋಗಿ ವಸ್ತುಗಳ ತಯಾರಿಕೆಗೆ ಬೇಕಾದ ಸಾಮಗ್ರಿಗಳನ್ನು ನೋಡಿದಾಗ ನಾವು ಆಶ್ಚರ್ಯಪಡುತ್ತೇವೆ. ಆದರೆ ಇದು ಈ ತಯಾರಿಕೆಯಲ್ಲಿ ಆಸಕ್ತಿ ಇದ್ದವರಿಗೆ ಸುಲಭ ಸಾಧ್ಯ. ಈ ಪುಸ್ತಕ ರಾಜ್ಯಮಟ್ಟದ ಮಹಿಳಾ ಸಾಹಿತಿ ಪ್ರಶಸ್ತಿಯನ್ನು ಪಡೆದಿದೆ.

'ಸ್ವ-ಅಭಿವೃದ್ಧಿ' ಕೈಪಿಡಿಯ ಮುನ್ನುಡಿಯಲ್ಲಿ ಶ್ರೀಮತಿ ಸಬಿತಾ ಎಸ್.ರಾವ್ ಹೀಗೆ ಹೇಳುತ್ತಾರೆ- "ಅಕ್ಕ ನಾನು ಪ್ರಕಟಿಸುವ ಪುಸ್ತಕಕ್ಕೆ ನೀವೇ ಏಕೆ ಮುನ್ನುಡಿಯನ್ನು ಬರೆಯಬಾರದು? ಎಂದ ನನ್ನ ವಾರಗಿತ್ತಿ ಶರಾವತಿಯ ಪ್ರಶ್ನೆಗೆ ಆಕೆ ನನ್ನ ಮೇಲಿರಿಸಿದ ಪ್ರೀತಿ ವಿಶ್ವಾಸ ಅಭಿಮಾನಗಳ ಜುಲುಮೆ ನನ್ನಿಂದ 'ಸರಿ' ಎಂಬ ಉತ್ತರವನ್ನಲ್ಲದೆ ಬೇರಾವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಸಾಧ್ಯ?

ಶರಾವತಿಯನ್ನು ಕಳೆದ ಇಪ್ಪತ್ತಮೂರು ವರ್ಷಗಳಿಂದ ಗಮನಿಸುತ್ತಿದ್ದೇನೆ. 'ಶರಾವತಿ' ಎನ್ನುವ ಹೆಸರು ಆಕೆಗೆ ಅನ್ವರ್ಥನಾಮವಾಗಿದೆ. ನದಿ ಶರಾವತಿ ತನ್ನ ಪರಿಸರವನ್ನು ಸಮೃದ್ಧವಾಗಿಸಿದ್ದಲ್ಲದೆ ಅಸಂಖ್ಯಾತ ಮನೆಗಳನ್ನು ಬೆಳಗಿಸಿದ್ದಾಳೆ. ಹಾಗೆಯೇ ನಮ್ಮ ಕ್ಷಿಪ್ರಾವಧಾನಿ ಶರಾವತಿ ವಿವಿಧ ಲೋಕಜ್ಞಾನ ಮಾಹಿತಿಗಳ ಆಗರವೇ ಆಗಿದ್ದು, ತನ್ನ ಸುತ್ತುಮುತ್ತಲಿನ ಜೀವಗಳೊಂದಿಗೆ ಸ್ಪಂದಿಸುತ್ತಾ, ಮುಖ್ಯವಾಗಿ ಗ್ರಾಮಾಂತರ ಹಾಗೂ ಹಿಂದುಳಿದ ಪ್ರದೇಶಗಳ ಮಹಿಳೆಯರಿಗಾಗಿ ಏರ್ಪಡಿಸಿರುವ ಅಭಿವೃದ್ಧಿ ಕಾರ್ಯಾಗಾರಗಳಲ್ಲಿ ಭಾಗವಹಿಸಿ ತನ್ನಲ್ಲಿರುವ ಅರಿವನ್ನು ಅವರಿಗೆ ನೀಡುವ ಮೂಲಕ ಒಂದು ಪುಟ್ಟ ಜ್ಞಾನದೀವಿಗೆಯಾಗಿದ್ದಾಳೆ ಎಂದರೆ ಅತಿಶಯೋಕ್ತಿಯಾಗಲಾರದು".

ಶ್ರೀ ಲಾಲಾಜಿ ಆರ್.ಮೆಂಡನ್, ಮಾಜಿ ಶಾಸಕರು, ಕಾಪು ವಿಧಾನಸಭಾ ಕ್ಷೇತ್ರ ಇವರ ಶುಭ ಹಾರೈಕೆ ಹೀಗಿದೆ- "ಶ್ರೀಮತಿ ಶರಾವತಿ ರವಿರಾಜ್, ಸಹಶಿಕ್ಷಕಿ, ಶ್ರೀ ದುರ್ಗಾದೇವಿ ಹಿರಿಯ ಪ್ರಾಥಮಿಕ ಶಾಲೆ, ಪಣಿಯೂರು, ಉಡುಪಿ ಇವರು ಸಿದ್ಧಪಡಿಸಿರುವ ಸ್ವ-ಅಭಿವೃದ್ಧಿ ಪುಸ್ತಕ, ಇದು ನಿತ್ಯ ಬಳಕೆಯ ಗೃಹೋಪಯೋಗಿ ವಸ್ತುಗಳನ್ನು ಕಡಿಮೆ ಖರ್ಚಿನಲ್ಲಿ ಮನೆಯಲ್ಲಿಯೇ ತಯಾರಿಸಿಕೊಳ್ಳಲು ಸಹಕಾರಿಯಾಗಿದೆ. ಇದು ಸ್ವಾವಲಂಬನೆಗೆ ದಾರಿಯಾಗಿದ್ದು ಇವರ ಪ್ರಯತ್ನದಲ್ಲಿ ಯಶಸ್ಸು ದೊರೆತು ಇವರು ಇನ್ನೂ ದೊಡ್ಡ ಪ್ರಮಾಣದಲ್ಲಿ ಪುಸ್ತಕ ಮುದ್ರಣ ಮಾಡುವ ಶಕ್ತಿ ದೇವರು ಕರುಣಿಸಲಿ".

ಬಿ. ನಾಗೇಂದ್ರ, ಮಧ್ಯಸ್ಥ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಡುಪಿ ದಕ್ಷಿಣ ವಲಯ ಇವರು ಹೀಗೆ ಶುಭ ಹಾರೈಸಿದ್ದಾರೆ-"ಸರಳತೆಯೇ ಸಂಪದ್ಭರಿತ




ಕೃತಿ : 'ಸ್ವ-ಅಭಿವೃದ್ಧಿ' (ಸಾಮಾಜಿಕ ಉಪಯುಕ್ತ ವಸ್ತುಗಳ ತಯಾರಿಕೆ ಕೈಪಿಡಿ) ಲೇಖಕಿ : ಶ್ರೀಮತಿ ಶರಾವತಿ ರವಿರಾಜ್ ಪ್ರಕಾಶಕರು : ವಿನುತ ಪ್ರಕಾಶನ ಬೆಲೆ : ರೂ.30/-

ಸಮಾಜಕ್ಕೆ ಮೂಲ ಎಂಬಂತೆ ಸರಳ ಜೀವನಕ್ಕೆ ಅವಶ್ಯವೆನಿಸುವ ಉಪಯುಕ್ತ ವಸ್ತುಗಳ ಬಗ್ಗೆ ಶ್ರೀಮತಿ ಶರಾವತಿ ರವಿರಾಜ್ ಇವರು ಬರೆದಿರುವ ಈ ಪುಸ್ತಕವು ಉತ್ತಮ ಮಾರ್ಗದರ್ಶಿ ಪುಸ್ತಕವಾಗಿದೆ. ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆಯೂ ಸಹಕಾರಿಯಾಗಿದೆ"

ಚಳ್ಳಕೆರೆ ಯರ್‍ರಿಸ್ವಾಮಿ, ಸಂಪಾದಕ, ಪುಟಾಣಿ ವಿಜ್ಞಾನ ಬಳಗ, ಚಿತ್ರದುರ್ಗ ಇವರು ಕೈಪಿಡಿಗೆ ಸೊಗಸಾದ ಬೆನ್ನುಡಿಯನ್ನು ಒದಗಿಸಿದ್ದಾರೆ-"ನಿತ್ಯ ಜೀವನದಲ್ಲಿ ನಾವೆಲ್ಲಾ ಮನೆಗಳಲ್ಲಿ ಬಳಸುವ ರಾಗಿಮಾಲ್ಟ್, ಹಣ್ಣಿನ ಜ್ಯೂಸ್ ಮತ್ತು ಸ್ಕ್ವಾಷ್, ಜಾಮ್, ಕ್ರೀಮ್ ಬಿಸ್ಕಟ್... ಇತ್ಯಾದಿ ತಿನಿಸುಗಳು ಹಾಗೂ ಫಿನಾಯಿಲ್, ಮೊಂಬತ್ತಿ, ಮನೆಮದ್ದು, ಸೋಪು, ಶಾಂಪು... ಇತ್ಯಾದಿಗಳ ತಯಾರಿಕೆಯ ಬಗೆಗೆ ಮನಮುಟ್ಟುವಂತೆ ಸರಳ ಮಾಹಿತಿ, ತರಬೇತಿ ನೀಡಬಲ್ಲ ಪರಿಣಿತರು ಶರಾವತಿ ಮೇಡಂ. ಕರ್ನಾಟಕದ ಉದ್ದಗಲಕ್ಕೆ ಸಂಚರಿಸುತ್ತಾ, ಆಹ್ವಾನ ಬಂದೆಡೆಗೆ ಹೋಗಿ, ಸ್ವಉದ್ಯೋಗದೆಡೆಗೆ ಸಾವಿರಾರು ಹೆಣ್ಣುಮಕ್ಕಳನ್ನು ತರಬೇತು ಗೊಳಿಸುತ್ತಿರುವ ಶರಾವತಿಯವರ ಕಾರ್ಯ ಸ್ತುತ್ಯಾರ್ಹ. ಹೀಗೆ ಸಾಗುತ್ತಿರುವ ಇವರ ಸೇವೆಗೆ, ಕ್ರಿಯಾಶೀಲತೆಗೆ ಅನೇಕ ಸಂಘ ಸಂಸ್ಥೆಗಳಿಂದ, ಸರ್ಕಾರದಿಂದ ಸಂದ ಸನ್ಮಾನ, ಸತ್ಕಾರಗಳು ಹಲವಾರು".

ಉದಾಹರಣೆಗೆ ಕೈಪಿಡಿಯಲ್ಲಿ ತಿಳಿಸಿದಂತೆ "ಕ್ರೀಮ್ ಬಿಸ್ಕೆಟ್" ತಯಾರಿಸುವ ರೀತಿ ಹೀಗಿದೆ :

ಬೇಕಾಗುವ ವಸ್ತುಗಳು :

1) ಬೆಣ್ಣೆ (2 ಟೀ ಚಮಚ)

2) ಆರೆಂಜ್ ಜ್ಯೂಸ್ ಪೌಡರ್ (6 ಟೀ ಚಮಚ)

ತಯಾರಿಸುವ ವಿಧಾನ :

ಬೆಣ್ಣೆ ಮತ್ತು ಜ್ಯೂಸ್ ಪೌಡರನ್ನು ಸ್ಟೀಲ್ ತಟ್ಟೆಗೆ ಹಾಕಿ ಸಾಟ ಮಾಡಿ ಕ್ರೀಮ್ ತಯಾರಿಸಿ. ಈ ಕ್ರೀಮನ್ನು ಎರಡು ಬಿಸ್ಕೆಟ್ ಮಧ್ಯದಲ್ಲಿ ಸ್ವಲ್ಪ ಸ್ವಲ್ಪ ಹಾಕಿ ತಿಂದು ನೋಡಿ.

ಶ್ರೀಮತಿ ಶರಾವತಿ ರವಿರಾಜ್ ಇನ್ನೂ ಹಲವು ಪುಸ್ತಕಗಳನ್ನು ಬರೆದು ಸಮಾಜಮುಖಿಯಾಗಲಿ ಎಂದು ಹಾರೈಸುತ್ತೇವೆ.

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ವಿದ್ಯಾರಂಭ ಮತ್ತು ಸರಸ್ವತೀ ಸ್ತೋತ್ರಗಳು

ಪವಿತ್ರಭಾರತದ ಸನಾತನಧರ್ಮವು ವಿಧಿಸಿರುವ ಶೈಕ್ಷಣಿಕ ಸಂಸ್ಕಾರಗಳಲ್ಲಿ ವಿದ್ಯಾರಂಭವು ಮೊದಲನೆಯದು. ಮಗುವಿನ ಬುದ್ಧಿವಿಕಾಸವಾಗಿ ಹೊರ ಪ್ರಪಂಚದ ಅರಿವು ಉಂಟಾಗಲು. ತನ್ನ ಮನಸ್ಸು ಅತ್ಯಂತ ಅಗತ್ಯ. ಈ ನಿಟ್ಟಿನಿಂದ ವಿದ್ಯಾರಂಭ ಅಥವಾ ಅಕ್ಷರಾರಂಭವು ಮಗುವೊಂದರ ಬದುಕಿನ ಪ್ರಮುಖ ಘಟ್ಟಗಳಲ್ಲಿ ಮೊದಲನೆಯದು.

ನಮ್ಮ ಪೂರ್ವಿಕರು ವಿದ್ಯಾರಂಭಕ್ಕೆ ಪ್ರಶಸ್ತವಾದ ಸಮಯವೆಂದರೆ ಮಗುವಿನ ಮೂರು ಅಥವಾ ಐದನೆಯ ವರ್ಷವೆಂದೂ, ಉತ್ತರಾಯಣವು ಶ್ರೇಷ್ಠ ಕಾಲವೆಂದೂ, ಕುಲ ಪುರೋಹಿತರ ಮಾರ್ಗದರ್ಶನದಲ್ಲಿ ತಂದೆಯು ಮಾತೃಭಾಷೆಯ ಮೊದಲ ಅಕ್ಷರವನ್ನು ತಟ್ಟೆಯಲ್ಲಿ ತುಂಬಿಸಿರುವ ಅಕ್ಕಿಯ ಮೇಲೆ ಅರಸಿನ ಕೊಂಬಿನ ಮೂಲಕ ಮಗುವಿನಿಂದ ಬರೆಸಿ, ಅದನ್ನು ಪೂಜಿಸಿ, ಹಿರಿಯರ ಆಶೀರ್ವಾದ ಪಡೆದು ಸಂಭ್ರಮಿಸಬೇಕೆಂದು ವಿಧಿಸಿದ್ದಾರೆ. ಈ ವಿಧಿ-ವಿಧಾನಗಳನ್ನು ನೆರವೇರಿಸಲು ಮನೆಯಲ್ಲಿ ಅನುಕೂಲವಿಲ್ಲದಿದ್ದಲ್ಲಿ ವಿದ್ಯಾಧಿದೇವತೆಯಾದ ಶೃಂಗೇರಿಯ ಶ್ರೀ ಶಾರದಾಂಬೆಯ ಸನ್ನಿಧಿಯಲ್ಲಿ ಅಥವಾ ತಮ್ಮ ಕುಲದೇವತೆಯ ಆಲಯದಲ್ಲಿ ನಡೆಸಬಹುದು.

ವಿದ್ಯಾರಂಭದ ನಂತರ ಮಗುವಿಗೆ ವರ್ಣಮಾಲೆಯ ಅಕ್ಷರಗಳನ್ನು ಸರಿಯಾಗಿ ತಿದ್ದಿಸಿ, ಅವುಗಳ ಸ್ಪಷ್ಟ ಉಚ್ಚಾರಣೆಯನ್ನು ಕಲಿಸಬೇಕು, ವಾಕ್‌ಶುದ್ಧಿಗಾಗಿ ಮತ್ತು ವಿದ್ಯೆಯ ಸಿದ್ಧಿಗಾಗಿ ವಿದ್ಯಾಧಿದೇವತೆಯಾದ ಸರಸ್ವತಿಯ ಸ್ತೋತ್ರಗಳನ್ನು ಪ್ರತಿನಿತ್ಯ ಹೇಳಿಸಬೇಕು.

ತಮ್ಮ ಬದುಕನ್ನು ವಿದ್ಯಾಕ್ಷೇತ್ರಕ್ಕಾಗಿ ಮೀಸಲಿರಿಸಿರುವ ಈ ಗ್ರಂಥದ ಲೇಖಕರಾದ ಡಾ। ನರಸಿಂಹಮೂರ್ತಿಯವರು ಈ ಎಲ್ಲ ವಿಚಾರಗಳನ್ನು ಪುಸ್ತಕದ ಆರಂಭದಲ್ಲಿ ಸರಳವಾಗಿ ವಿವರಿಸಿದ್ದಾರೆ. ಶ್ರೀ ಸರಸ್ವತಿಗೆ




ಲೇಖಕರು: ಡಾ। ಎಚ್.ವಿ. ನರಸಿಂಹಮೂರ್ತಿ, ಕುಂದಾಪುರ ಪ್ರಕಾಶಕರು: ವಿಕಾಸ ಪ್ರಕಾಶನ "ಚೇತನ", ನೇರಂಬಳ್ಳಿ ರಸ್ತೆ, ಕೋಟೇಶ್ವರ ಅಂಚೆ-576222, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ. ದೂರವಾಣಿ: 08254-261145 ಪುಟಗಳು:32

ಸಂಬಂಧಿಸಿದ ಸರಳವಾದ ಸ್ತೋತ್ರಗಳು ಇಲ್ಲಿವೆ. ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳು ರಚಿಸಿದ 'ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜದಯಿತೇ ಸತ್ವರಂ ದೇಹಿ ಮಹ್ಯಂ' ಎಂಬ ಅತ್ಯಂತ ಸುಂದರವಾದ ಒಂದು ಶಾರದಾಸ್ತೋತ್ರ ಹಾಗೂ ವಿದ್ಯೆಯ ಅಧಿದೇವತೆಯಾದ ಶಾರದೆಯ ಅಷ್ಟೋತ್ತರ ಸಹಸ್ರನಾಮಾವಳಿಯೂ ಈ ಪುಸ್ತಕದಲ್ಲಿವೆ. ತಮ್ಮ ಮಕ್ಕಳಿಗೆ ವಿದ್ಯಾರಂಭ ಮಾಡುವ ಮೊದಲು ಎಲ್ಲ ಪೋಷಕರೂ ಅಗತ್ಯವಾಗಿ ಓದಲೇ ಬೇಕಾದ ಪುಸ್ತಕವಿದು. ಮಾತ್ರವಲ್ಲ ವಿದ್ಯೆಯನ್ನು ಆರಂಭಿಸಿದ ಮಕ್ಕಳು ಪ್ರತಿನಿತ್ಯವೂ ಇದರಲ್ಲಿರುವ ಸರಸ್ವತೀ ಸ್ತೋತ್ರಗಳನ್ನು ತಮ್ಮ ಮನೆಯಲ್ಲಿ ದೇವರ ಮುಂದೆ ಪಾರಾಯಣ ಮಾಡಬೇಕು. ಹಾಗೆ ಮಾಡಿದಾಗ ಅವರು ವಿದ್ಯಾವಿನಯ ಸಂಪನ್ನರಾಗುವುದರಲ್ಲಿ ಸಂಶಯವಿಲ್ಲ.

## ಡಾ. ಸಂಪತ್ ಕುಮಾರರಿಂದ ಹೊಸ ಕಂಪೆನಿ ಆರಂಭ



ಮಣಿಪಾಲ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಡಾ.ಸಂಪತ್ ಕುಮಾರ್ ಅವರು ಮಣಿಪಾಲದಲ್ಲಿ ಕುಮುದ ಹೆಲ್ತ್ ಟೆಕ್ ಪ್ರೈ.ಲಿ ಎಂಬ ಹೊಸ ಕಂಪೆನಿಯನ್ನು ಆರಂಭಿಸಿದ್ದಾರೆ. ಈ ಕಂಪೆನಿಯು ಬೆನ್ನುಮೂಳೆಯ ನ್ಯೂನತೆ ಹೊಂದಿರುವವರಿಗೆ ಮೂರು ಆಯಾಮ (3ಡಿ) ಚಿತ್ರಣವನ್ನು ಒದಗಿಸುವ ತಂತ್ರಾಂಶವನ್ನುಉತ್ಪಾದಿಸಲಿದೆ. ತನ್ಮೂಲಕ ಅಂತಹ ವ್ಯಕ್ತಿಗಳ ಸುಲಭ ಚಿಕಿತ್ಸೆಗೆ ಸಹಕರಿಸಲಿದೆ. ಈ ಕಂಪೆನಿಯ ಆರಂಭಕ್ಕೆ ಹಾಗೂ ತಂತ್ರಜ್ಞಾನದ ಅಭಿವೃದ್ಧಿಗೆ ಕೇಂದ್ರಸರಕಾರದ BIRAC-DBTಯು 50 ಲಕ್ಷರೂಪಾಯಿಗಳ ಧನ ಸಹಾಯವನ್ನೂ ಮಾಡಿರುತ್ತದೆ. ಡಾ. ಸಂಪತ್ ಕುಮಾರ್ ಅವರು ಕುಂಭಾಶಿಯಲ್ಲಿ ನೆಲೆಸಿರುವ ಐ.ಪಿ.ರವೀಂದ್ರ ರಾಯರು ಹಾಗೂ ಕೀರ್ತಿಶೇಷ ಕುಮುದ್ವತಿಯವರ ಸುಪುತ್ರರು.

## ಹಿರಿಯ ಸಹಾಯಕ ನಿರ್ದೇಶಕರಾಗಿ ಶ್ರೀಮತಿ ಜಾಹ್ನವಿ. ಸಿ.



ಉಡುಪಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಉಡುಪಿ ಇಲ್ಲಿ ಹಿರಿಯ ಉಪನ್ಯಾಸಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಸಿ. ಜಾಹ್ನವಿ, KES, MA, B.Ed ಇವರು ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಶಿಕ್ಷಣ ಇಲಾಖಾ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿಗೆ ಹಿರಿಯ ಸಹಾಯಕ ನಿರ್ದೇಶಕರಾಗಿ ವರ್ಗಾವಣೆಗೊಂಡು ದಿನಾಂಕ 25-08-2017ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಇವರು ಅಡೂರಿನ ದಿ। ಪಣಿಯಪ್ಪ ಮತ್ತು ಶ್ರೀಮತಿ ಲೀಲಾವತಿ ಇವರ ಪುತ್ರಿಯಾಗಿದ್ದು, ಕಾರ್ಕಳ ತಾಲೂಕು ಕರ್ವಾಲಿನ ಶ್ರೀ ಕೆ. ಹರಿಶ್ಚಂದ್ರ ರಾವ್ ಇವರ ಧರ್ಮಪತ್ನಿಯಾಗಿರುತ್ತಾರೆ.

# ಕಡಬದಲ್ಲಿ ಶರನ್ನವರಾತ್ರಿ ಸಂಭ್ರಮ



ನಮ್ಮ ಸಮಾಜದ ಪ್ರತಿಷ್ಠಿತ ಜಡೆಮನೆ ಶ್ರೀ ಅರುಣಕುಮಾರರವರ ನೇತೃತ್ವದಲ್ಲಿ ಅವರ ಸ್ವಂತ ಜಾಗದಲ್ಲಿ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಜಯದುರ್ಗಾ ಪರಮೇಶ್ವರೀ ದೇವಿಯ 'ಬಾಲಾಲಯ'ದಲ್ಲಿ ನವರಾತ್ರಿಯ ದಿನಗಳಲ್ಲಿ ವಿಶೇಷ ಪೂಜಾದಿಗಳು ಸಮಾಜದ ಬಂಧುಗಳ ಹಾಗೂ ಊರವರ ಸಹಕಾರದಿಂದ ನಡೆದು, ತಾ.30-09-2017ರ ವಿಜಯದಶಮಿ ಯಂದು ಸಂಭ್ರಮದಿಂದ ಸಂಪನ್ನಗೊಂಡಿತು. ಮುಖ್ಯವಾಗಿ ಲಲಿತಾ ಪಂಚಮಿಯಂದು ಮಂಗಳೂರು ನಿವಾಸಿ ಶ್ರೀ ಕನ್ನಾನ ಸುರೇಶ ರಾವ್ (ನಿವೃತ್ತ ಜನರಲ್ ಮೇನೇಜರ್ ಕೋಲ್ ಇಂಡಿಯಾ ಲಿಮಿಟೆಡ್) ದಂಪತಿಗಳು ಹಾಗೂ ಶ್ರೀ ರಾಜೇಶ್ ಕೊಲ್ವೆ (ಪ್ವಾಲಕರು, ಸತ್ಯಶ್ರೀ ಮೆಡಿಕಲ್ಸ್, ಕಡಬ) ದಂಪತಿಗಳ ವತಿಯಿಂದ ವಿವಿಧ ಸೇವಾದಿಗಳು ನಡೆದವು. ಪುರೋಹಿತರು ಗಳಾದ ಶ್ರೀಮಾನ್ ಕೃಷ್ಣರಾಜ ಭಟ್, ಹೆಜಮಾಡಿ ಹಾಗೂ ಕಿಗ್ಗ ನಾಗಭೂಷಣ ಶಾಸ್ತ್ರೀಯವರ ಪೌರೋಹಿತ್ಯದಲ್ಲಿ ರಾತ್ರಿ ಪಂಚಜ್ಯೋತಿ ಪ್ರತಿಷ್ಠಾಪಿಸಿ 'ಸಪ್ತಶತೀ' ಪಾರಾಯಣದೊಂದಿಗೆ, ಪ್ರಸಕ್ತ ಉಡುಪಿ ನಿವಾಸಿ, ಶ್ರೀ ಕೋಲ್ವೆ ಗೋಪಾಲಕೃಷ್ಣರಾವ್ (ಜಿ.ಕೆ.ಕೋಲ್ವೆ) (ಉಪಾಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು) ದಂಪತಿಗಳು ದುರ್ಗಾನಮಸ್ಕಾರ ಪೂಜೆಯನ್ನು ಸೇವಾರ್ಥಿಗಳಾಗಿ ನೆರವೇರಿಸಿದರು. ಶ್ರೀ ದೇವಿಗೆ ನೂತನ ಶಿಲಾಮಯ ಗರ್ಭಗುಡಿ-ತೀರ್ಥಮಂಟಪದ ಕಾಮಗಾರಿಗಳು ನಡೆಯುತ್ತಿದ್ದು, ಅತೀ ಶೀಘ್ರದಲ್ಲಿ ಸಮಸ್ತರ ಸಹಕಾರದಿಂದ 'ಜಯದುರ್ಗೆ'ಯು 'ಬಾಲಾಲಯದಿಂದ ಶಾಶ್ವತ ದೇವಾಲಯದಲ್ಲಿ ವಿರಾಜಮಾನಗಳಾಗಲಿ' ಎಂದು ಈ ಶುಭ ಸಂದರ್ಭದಲ್ಲಿ ಪ್ರಾರ್ಥಿಸಲಾಯಿತು. ಮಹಾಪೂಜೆ ನಂತರ ಸಮಾಜ ಬಾಂಧವರಿಗೆ ಪ್ರಸಾದ ಭೋಜನ ವ್ಯವಸ್ಥೆಯನ್ನು ಸೇವಾರ್ಥಿಗಳು ಮಾಡಿದ್ದರು.

ವರದಿ : **ಜಿ.ಕೆ ಕೋಲ್ವೆ, ಉಡುಪಿ.**

# ಸರಕಾರಿ ಕೆಲಸ ದೇವರ ಕೆಲಸ (...ನೆನಪಿನಂಗಳದಿಂದ)

**ಲೇಖಕ : ಜಿ.ಕೆ.ಕೋಲ್ವೆ**

ಕರುನಾಡ ಜಿಲ್ಲೆಯೊಂದರ ಲೀಡ್ ಬ್ಯಾಂಕ್ ಅಂದರೆ ಮಾರ್ಗದರ್ಶಿ ಬ್ಯಾಂಕಿನ ವ್ಯವಸ್ಥಾಪಕನಾಗಿದ್ದಾಗ ಜಿಲ್ಲಾ ಪಂಚಾಯ್ತಿಯ ವಿವಿಧ ಸರಕಾರಿ ಸಂಸ್ಥೆಗಳೊಂದಿಗೆ ಆ ಜಿಲ್ಲೆಯ ಬ್ಯಾಂಕುಗಳ ಪರವಾಗಿ ಸರಕಾರಿ ಪ್ರಾಯೋಜಿತ ಸಾಲ-ಸೌಲಭ್ಯಗಳ ಪ್ರಗತಿ ಹಾಗೂ ಗುರಿ ಸಾಧನೆ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯದರ್ಶಿಗೆ ವರದಿ ಒಪ್ಪಿಸುವ ಜವಾಬ್ದಾರಿ ನನ್ನದಾಗಿತ್ತು. ಅದಾಗಲೇ ಹೊಸದಾಗಿ ಹುದ್ದೆ ಅಲಂಕರಿಸಿದ ದೇಶದ ಉತ್ತರ ಭಾಗದ ಈ ಐ.ಎ.ಎಸ್. ಅಧಿಕಾರಿಗೆ ಆದಷ್ಟು ಬೇಗನೆ ಶ್ರೀಮಂತನಾಗುವ ಕಾತರ. ಆ ಅವಧಿಯಲ್ಲಿ ಸರಕಾರದಿಂದ ಬಿಡುಗಡೆಯಾದ ಸಾಕಷ್ಟು ಅನುದಾನ, ಸಹಾಯಧನ ಇತ್ಯಾದಿಯನ್ನು ಬ್ಯಾಂಕ್‌ಗಳಲ್ಲಿ ತಾತ್ಕಾಲಿಕವಾಗಿ ಹೂಡಿಕೆ ಮಾಡಬಹುದಿತ್ತು. ಕೆಲವು ಬ್ಯಾಂಕರುಗಳು ಸರಕಾರದ ಸಾಲ ಸೌಲಭ್ಯಗಳ ಗುರಿ ಸಾಧಿಸಿ, ಸರಕಾರದಿಂದ ಬಂದ ಹಣವನ್ನು ಅವರವರ ಶಾಖೆಗಳಲ್ಲಿ ಖಾತೆ ತೆರೆದು, ಹೂಡಿಕೆ ಮಾಡಲು ನನ್ನ ಮುಖಾಂತರ ಒತ್ತಡ ತರುತ್ತಿದ್ದರು. ಆ ಅಧಿಕಾರಿ, ಪ್ರತಿಫಲವಾಗಿ ಬೆಲೆಬಾಳುವ ಇನಾಮು/ಕಾಣಿಕೆ ಅಪೇಕ್ಷಿಸುತ್ತಿದ್ದು ನನ್ನೊಡನೆ ಬ್ಯಾಂಕ್ ಅಧಿಕಾರಿಗಳಿಗೆ ತಿಳಿಸಲು ಸೂಚಿಸುತ್ತಿದ್ದರು. ಸಾಕಷ್ಟು ಮಂದಿ ಕಾಣಿಕೆ ಕೊಟ್ಟು ವರ್ಷಾಂತ್ಯದ ಡಿಪಾಸಿಟ್ ಗುರಿ ಮುಟ್ಟಿದ್ದರಂತೆ! ಆ ಕಾಲದಲ್ಲಿ ಇದು ಸರ್ವೇ ಸಾಮಾನ್ಯವಾಗಿತ್ತು. ನಾನೂ ಇದಕ್ಕೆ ಹೊರತಲ್ಲ. ಬ್ಯಾಂಕಿನ ಆಡಳಿತ ಇದನ್ನು ವಿರೋಧಿಸಿದರೂ, ವ್ಯವಸ್ಥಾಪಕರುಗಳು ಸ್ವಂತದಿಂದ ಈ ಖರ್ಚನ್ನು ನಿಭಾಯಿಸಿ, ಮೇಲಧಿಕಾರಿಗಳಿಂದ 'ಭೇಷ್' ಎನಿಸಿಕೊಳ್ಳುತ್ತಿದ್ದರು. ಜಿಲ್ಲಾಮಟ್ಟದ ಆ ಮುಖ್ಯ ಅಧಿಕಾರಿಗೆ ನಾನಾ ಕಡೆಗಳಿಂದ ಹಣ ಬಾಚುವ ಸಾಕಷ್ಟು ಯೋಜನೆಗಳು ಸಾಕಾಗದೆ, ತನ್ನ ಸರಕಾರಿ ಬಂಗ್ಲೆಯಲ್ಲೆ ಕೆಲಸ ಮಾಡುವ ನಾಲ್ಕನೇ ದರ್ಜೆಯ ಸರಕಾರಿ ನೌಕರನ ಮುಖಾಂತರ ಒಳ್ಳೆಯ ತಳಿಯ ಒಂದೆರಡು ದನಗಳನ್ನು (ಸಂಬಂಧಪಟ್ಟ ಇನ್ನೊಂದು ಇಲಾಖೆಯ ಕೃಪೆಯಿಂದ ತರಿಸಿದ್ದು) ಸಾಕುತ್ತಾ ಹಾಲು ಕರೆಸಿ ಸ್ವಂತಕ್ಕೆ ಸ್ವಲ್ಪ ಇಟ್ಟುಕೊಂಡು, ಉಳಿದ ಹಾಲನ್ನು ಮಾರಾಟ ಮಾಡುತ್ತಿದ್ದರಂತೆ! ಉಸ್ತುವಾರಿ ಸಚಿವರ ಕೃಪಾಶೀರ್ವಾದದೊಂದಿಗೆ, ಮೇಲಿನವರಿಗೆ ತಿನ್ನಿಸುತ್ತಾ-ತಾನೂ ತಿಂದು ಬೇಗನೆ ಮೇಲಿನ ಹುದ್ದೆಗಳಿಗೇರಿದರಂತೆ! ಹೀಗಿರುವಾಗ, ''ತಾನೊಂದು ಬಗೆದರೆ, ದೈವ ಒಂದು ಬಗೆಯಿತೆಂಬಂತೆ'' ಕೆಲವು ದಿನ ಶ್ರೀಕೃಷ್ಣ ಜನ್ಮಸ್ಥಾನ ನೋಡಿ ಹಿಂದಿರುಗುತ್ತಾ, ''ಸಾಕಪ್ಪಾ ಸಾಕು, ಈ ಸರಕಾರಿ ಕೆಲಸ'' ಎಂದರಂತೆ!

ರಾಜ್ಯದ ಶ್ರೀಸಾಮಾನ್ಯ ಉವಾಚ : ''ಸರಕಾರಿ ಕೆಲಸ ದೇವರ ಕೆಲಸ''-ನಿಯತ್ತಿನಿಂದ ದುಡಿದವರಿಗೆ!

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.07-11-2017 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.25-10-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.24-10-2017 ಮತ್ತು ತಾ.08-11-2017 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಕಾರ್ಕಳ ಸಾಹಿತ್ಯ ಸಂಘದಲ್ಲಿ ಚಿಂತನ ಕಾರ್ಯಕ್ರಮ




ದಿನಾಂಕ 31-8-2017ರಂದು ಕಾರ್ಕಳ ಸಾಹಿತ್ಯ ಸಂಘದ ವಿಂಶತಿ ವರ್ಷಾಚರಣೆಯ ಅಂಗವಾಗಿ ಮೂವರು ಆಕಾಶವಾಣಿ ಚಿಂತಕರಿಂದ ಚಿಂತನ ಕಾರ್ಯಕ್ರಮ ನಡೆಯಿತು. ಕಾರ್ಕಳದ ಹೋಟೆಲ್ ಪ್ರಕಾಶ್ ಸಭಾಭವನದಲ್ಲಿ ನಡೆದ ಅಂದಿನ ಚಿಂತನ ಗೋಷ್ಠಿಯಲ್ಲಿ ಶಿಕ್ಷಕ ಶ್ರೀ ರಾಂ ಎಲ್ಲಂಗಳ ಅವರು ಮೂರು ಚಿಂತನಗಳನ್ನು ವಾಚಿಸಿದರು. ಬಳಿಕ ಇನ್ನಿಬ್ಬರು ಚಿಂತಕರು ಶ್ರೀ ಮುನಿರಾಜ ರೆಂಜಾಳ ಹಾಗೂ ಕುದಿ ವಸಂತ ಶೆಟ್ಟಿ ಅವರು ತಮ್ಮ ಚಿಂತನಗಳನ್ನು ಪ್ರಸ್ತುತಪಡಿಸಿದರು. ಸಂಘದ ಸ್ಥಾಪಕಾಧ್ಯಕ್ಷ ಪ್ರೊ. ರಾಮಚಂದ್ರ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

# ಪಾಂಡಿಚೇರಿಯಲ್ಲಿ ಚಿತ್ರಕಲಾ ಪ್ರದರ್ಶನ



ಜನಾರ್ದನರಾವ್ ಹಾವಂಜೆಯವರ "ಎಕ್ಸ್‌ಪ್ರೆಶನ್ಸ್-2017" ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಇತ್ತೀಚೆಗಷ್ಟೇ ಪಾಂಡಿಚೇರಿಯ ಮೇಸನ್ ಪೆರುಮಾಳ್ ಆರ್ಟ್‌ಗ್ಯಾಲರಿಯಲ್ಲಿ ಭಾವನಾ ಫೌಂಡೇಶನ್(ರಿ.) ಹಾವಂಜೆ, ಆರ್ಟಿಸ್ಟ್ ಫೋರಂ ಉಡುಪಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಕಾರದೊಂದಿಗೆ ನಡೆಯಿತು.

ಅಲ್ಲದೇ ಕಳೆದ ಆಗಸ್ಟ್ ತಿಂಗಳಿನಲ್ಲಿ ಮಣಿಪುರದಲ್ಲಿ ನಡೆದ ಇಂಟರ್‌ನ್ಯಾಷನಲ್ ಆರ್ಟ್‌ಕ್ಯಾಂಪ್‌ನಲ್ಲೂ ದಕ್ಷಿಣಭಾರತವನ್ನು ಪ್ರತಿನಿಧಿಸಿದ್ದ ಏಕೈಕ ಕಲಾವಿದರಾಗಿದ್ದ ಇವರು ಸೆಪ್ಟಂಬರ್ ತಿಂಗಳ ಕೊನೆಯ ವಾರದಲ್ಲಿ ರಶ್ಯಾದ ನಿಜ್ನಿ ನವ್ಗೋರೋದ್‌ನಲ್ಲಿ "ಇಂಡಿಯನ್‌ಕಾಂಟೆಂಪರರಿ" ಎನ್ನುವ ಸಮೂಹ ಕಲಾಪ್ರದರ್ಶನದಲ್ಲೂ ಭಾಗವಹಿಸಿ ಅಲ್ಲಿಯೂ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದಾರೆ.

ಯಕ್ಷಗಾನಗುರು ಹಾವಂಜೆ ಮಂಜುನಾಥರಾವ್ ಮತ್ತು ಶ್ರೀಮತಿ ಬೇಬಿ ಎಂ.ರಾವ್‌ರವರ ದ್ವಿತೀಯ ಪುತ್ರರಾಗಿರುವ ಇವರು ಪ್ರಸ್ತುತ ಮಣಿಪಾಲ ವಿಶ್ವವಿದ್ಯಾಲಯದಲ್ಲಿ ಅಂತಿಮ ಹಂತದ ಪಿ.ಹೆಚ್.ಡಿ. ಪ್ರಬಂಧ ಮಂಡನಾ ತಯಾರಿಯಲ್ಲಿದ್ದಾರೆ. ಇವರ ರಶ್ಯಾ ಪ್ರವಾಸ ಹಾಗೂ ಕಲಾವಲಯದಲ್ಲಿನ ಸಾಧನೆಗಾಗಿ ಅಭಿನಂದನೆಗಳು.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಲ್ಲೆಸ್ಟೀ ಎಂಟರ್‌ಪ್ರೈಸಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

SAMPATH KUMAR
Mobile : 9741508881
8884873233
**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

## ರಾಂ ಎಲ್ಲಂಗಳರವರಿಗೆ ಹುಟ್ಟೂರ ಸನ್ಮಾನ



ಕರ್ನಾಟಕ ಬಾಲವಿಕಾಸ ಅಕಾಡೆಮಿ ಪುರಸ್ಕೃತ ನಾಟಕಕಾರ ರಾಂ ಎಲ್ಲಂಗಳ ಅವರನ್ನು ಅವರ ಹುಟ್ಟೂರಾದ ಮಧೂರಿನ ಎಲ್ಲಂಗಳದಲ್ಲಿ ಯುವಶಕ್ತಿ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ಬಿನ ನೂತನ ಕಾರ್ಯಾಲಯ ಉದ್ಘಾಟನಾ ಸಮಾರಂಭದಲ್ಲಿ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಿ ಅಭಿನಂದಿಸಲಾಯಿತು. ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ, ಕಾಸರಗೋಡು ಶಾಸಕ ಶ್ರೀ ಎನ್.ಎ.ನೆಲ್ಲಿಕುನ್ನು, ಪಂಚಾಯತ್ ಸದಸ್ಯೆ ಶ್ರೀಮತಿ ಸುಜ್ಞಾನಿ ಎಸ್. ಶ್ಯಾನುಭೋಗ್ ಮೊದಲಾದವರು ಉಪಸ್ಥಿತರಿದ್ದರು.

## ರಾಯಿ ರಾಜಕುಮಾರ್‌ರವರಿಗೆ ಸನ್ಮಾನ



ಕರ್ನಾಟಕ ರಾಜ್ಯ ಹೈಸ್ಕೂಲ್ ಹಿಂದಿ ಭಾಷಾ ಶಿಕ್ಷಕರ ಸಂಘದ ವತಿಯಿಂದ ಮೂಡುಬಿದ್ರಿಯ ಶ್ರೀ ರಾಯಿರಾಜಕುಮಾರ್‌ರವರು ಸನ್ಮಾನಿತಗೊಂಡರು.

## ಅಮೇರಿಕಾದಲ್ಲಿ ಶ್ರೀ ಮ. ನಾ. ಹೆಬ್ಬಾರರಿಂದ ಹರಿಕಥೆಗಳ ಸರಣಿ



ಅಮೇರಿಕಾ ದೇಶದ ಅಟ್ಲಾಂಟಾ ನಗರದಲ್ಲಿ ಭಾರತೀಯರ ಸಾರ್ವಜನಿಕ ಗಣೇಶೋತ್ಸವದ ಸಂದರ್ಭದಲ್ಲಿ ಹರಿದಾಸ ಶ್ರೀ ಮ. ನಾ. ಹೆಬ್ಬಾರ್‌ರವರು ‘ಗಣೇಶ ಮಹಿಮೆ’ (ಗೋಕರ್ಣ ಕ್ಷೇತ್ರ ಮಹಾತ್ಮೆ) ಎಂಬ ಪುಣ್ಯಕಥಾಭಾಗದ ಹರಿಕಥೆ ನಡೆಸಿದರು. ಕನ್ನಡದಲ್ಲಿ ಪದ್ಯಗಳನ್ನು ಹೇಳಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿವರಗಳನ್ನಿತ್ತರು. ದಿನಾಂಕ 9ರಂದು ಶ್ರೀ ನಾಗರಾಜ ಹೆಬ್ಬಾರ್ ಇವರ ಮನೆಯಲ್ಲಿ ಜರುಗಿದ ಸತ್ಯನಾರಾಯಣ ಪೂಜೆಯ ಸಂದರ್ಭದಲ್ಲಿ ಶ್ರೀ ಸತ್ಯನಾರಾಯಣ ಪೂಜಾ ಮಹಾತ್ಮೆಯನ್ನು ವಿವರಿಸುತ್ತಾ ‘ಭಕ್ತ ಧ್ರುವ’ ಎಂಬ ಕಥಾಭಾಗದ ಹರಿಕಥೆಯನ್ನು ನಡೆಸಿದರು. ಶ್ರೀ ನಾಗರಾಜ ಹೆಬ್ಬಾರ್, ರಟ್ಟಾಡಿ ಮತ್ತು ಶ್ರೀಮತಿ ಡಾ। ಸುಪ್ರಿಯಾ ಹೆಬ್ಬಾರ್ ಇವರುಗಳು ಹರಿದಾಸರನ್ನು ಗೌರವಿಸಿದರು.

## ನಿಧನ

ಮೂಡಿಗೆರೆ ಶ್ರೀ ಕಳಮೆ ವಿಠಲ ರಾವ್‌ರವರು ತಾ.13-9-2017ನೇ ಬುಧವಾರ ನಿಧನ ಹೊಂದಿದರು.



ಗಣೇಶ ಚತುರ್ಥಿಯಂದು ಕರಂದಾಡಿ ಶಾನುಭಾಗರ ಮನೆ “ಶ್ರೀ ಅನ್ನಪೂರ್ಣ” ದಲ್ಲಿ ಶ್ರೀ ಪದ್ಮನಾಭ ಶಾನುಭಾಗ್ ಇವರು ರಚಿಸಿ ಪೂಜಿಸಲ್ಪಟ್ಟ ಗಣಪತಿ..

## ಶುಭ ವಿವಾಹ

ಅಜೆಕಾರು ಶ್ರೀಮತಿ ಭಾರ್ಗವಿ ಹಾಗೂ ಶ್ರೀ ಕೃಷ್ಣರಾವ್‌ರವರ ಪುತ್ರ **ವಿಶಾಂತ್** ಹಾಗೂ ಶ್ರೀಮತಿ ಶಾಂತಲಾ ಹಾಗೂ ಶ್ರೀ ಕೊಟ್ರ ಗೌಡಪ್ಪನವರ ಪುತ್ರಿ **ಶ್ವೇತಾ** ಇವರ ವಿವಾಹವು ತಾ.28-09-2017ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★ ★★★★

ಕಿರಿಮಂಜೇಶ್ವರ ಶ್ರೀಮತಿ ಪುಷ್ಪಲತಾ ಮತ್ತು ಶ್ರೀ ಉಮೇಶ್ ಶ್ಯಾನುಭಾಗ್‌ರವರ ಪುತ್ರ **ಆಶಿಶ್** ಹಾಗೂ ಮೂಡಬಿದ್ರಿ ಶ್ರೀಮತಿ ಸುಜಾತ ಮತ್ತು ಶ್ರೀ ಕುಮಾರಸ್ವಾಮಿ ಇವರ ಪುತ್ರಿ **ಪಂಚಮಿ** ಇವರ ವಿವಾಹವು ತಾ.05-10-2017ರಂದು ಮೂಡಬಿದ್ರಿ ಶ್ರೀ ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಗೃಹ ಪ್ರವೇಶ

ಬೆಂಗಳೂರುನಲ್ಲಿ ಲೆಕ್ಕಪರಿಶೋಧಕರಾಗಿರುವ ಸಿಎ ಕಿರಣ್ ಶ್ಯಾನುಭೋಗ್ (ಅಂಬಲಪಾಡಿ ಶ್ರೀಮತಿ ಮಹಾಲಕ್ಷ್ಮೀ ಶ್ಯಾನುಭೋಗ್ ಹಾಗೂ ಎಚ್.ಎನ್. ಶ್ಯಾನುಭೋಗ್ ಇವರ ಪುತ್ರ) ಹಾಗೂ ಅನ್ನಪೂರ್ಣ ದಂಪತಿಗಳು ತಾರೀಕು 23-08-2017ರಂದು ಬೆಂಗಳೂರಿನ ಇಲೆಕ್ಟ್ರಾನಿಕ್ ಸಿಟಿಯಲ್ಲಿರುವ “ICON HAPPY LIVING APARTMENT” ವಸತಿ ಸಮುಚ್ಚಯ ದಲ್ಲಿರುವ ತಮ್ಮ ಮನೆಯ ಗೃಹಪ್ರವೇಶವನ್ನು ನೆರವೇರಿಸಿದರು.

**ಮೊದಲಿನ ವಿಳಾಸ : CA KIRAN SHANBOUGH**, 'Padmanaaba Nilaya', SGS Layout, Kothnoor Dinne main Road, J.P. Nagar, 8th Phase, BANGALORE.

**ಈಗಿನ ಹೊಸ ವಿಳಾಸ : CA KIRAN SHANBOUGH**, F.304, ‘Icon Happy Living-Apartments, Opp. Biocon, Kammasandra, Electronic City, BANGALORE-560100


## ನಂದಿಕೂರು ಜನಾರ್ದನ ರಾಯರಿಗೆ ಸನ್ಮಾನ



ಪಡುಬಿದ್ರಿ ಜೇಸಿ ವತಿಯಿಂದ ಯುವ ಉದ್ಯಮಿ ನಂದಿಕೂರು ಜನಾರ್ದನ ರಾಯರನ್ನು ಸನ್ಮಾನಿಸಲಾಯಿತು.

### ತುಲಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 17-10-2017 | ತುಲಾ ಸಂಕ್ರಮಣ, ಸಾಯಂ ಜಲಪೂರಣಂ ರಾತ್ರೌ ಚಂದ್ರೋದಯೇ ತೈಲಾಭ್ಯಂಗ: ಗಂಟೆ 5ಕ್ಕೆ | 01-11-2017 | ಉತ್ಥಾನ ದ್ವಾದಶಿ, ತುಳಸೀಪೂಜೆ ಉಡುಪಿ ಲಕ್ಷದೀಪಾರಂಭ |
| | | 04-11-2017 | ಹುಣ್ಣಿಮೆ ಉಡುಪಿ ಲಕ್ಷದೀಪ ಸಮಾಪ್ತಿ |
| 18-10-2017 | ನರಕ ಚತುರ್ದಶಿ | 05-11-2017 | ಕಾರ್ತಿಕ ಮಾಸ ಕೃಷ್ಣಪಕ್ಷಾರಂಭ |
| 19-10-2017 | ದೀಪಾವಳಿ, ಧನಲಕ್ಷ್ಮೀ ಪೂಜೆ, ಅಮಾವಾಸ್ಯೆ | 07-11-2017 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9-17ಕ್ಕೆ |
| 20-10-2017 | ಬಲಿಪಾಡ್ಯಮಿ, ಗೋಪೂಜೆ, ತುಳಸೀಪೂಜಾರಂಭ, ಕಾರ್ತಿಕಮಾಸ ಶುಕ್ಲಪಕ್ಷಾರಂಭ | 14-11-2017 | ಸರ್ವೈಕಾದಶಿ |
| | | 16-11-2017 | ವೃಶ್ಚಿಕ ಸಂಕ್ರಮಣ |
| | | 18-11-2017 | ಅಮಾವಾಸ್ಯೆ |
| 31-10-2017 | ಸರ್ವೈಕಾದಶಿ | 19-11-2017 | ಮಾರ್ಗಶಿರ ಮಾಸ ಶುಕ್ಲಪಕ್ಷಾರಂಭ |


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.


N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

RAJESH POWER PRESS
PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

*With Best Complimemts From*
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ವಿದ್ಯಾನಿಧಿಗೆ ಕೊಡುಗೆ



ಬೆಂಗಳೂರಿನ ಜಯನಗರದಲ್ಲಿ ವಾಸವಾಗಿರುವ ಕೆನರಾ ಬ್ಯಾಂಕಿನ ನಿವೃತ್ತ ಉದ್ಯೋಗಿ ಶ್ರೀ ಬಿ. ಗೋವಿಂದ ರಾಯರು ವಿದ್ಯಾರ್ಥಿವೇತನ ನಿಧಿಗೆ ರೂ.1,00,000/-ಗಳನ್ನು ದೇಣಿಗೆಯಾಗಿತ್ತಿದ್ದಾರೆ. ಶ್ರೀಯುತರು ದಿ. ಬೈಲಕೆರೆ ಪುಟ್ಟಣ್ಣಯ್ಯ ಹಾಗು ಶ್ರೀಮತಿ ಲಕ್ಷ್ಮೀ ದಂಪತಿಗಳ ಪುತ್ರ. 1959ನೆಯ ಇಸವಿಯಲ್ಲಿ ಕೆನರಾ ಬ್ಯಾಂಕಿನಲ್ಲಿ ವೃತ್ತಿಜೀವನ ಆರಂಭಿಸಿ ಸಿ.ಎ.ಐ.ಐ.ಬಿ ಪದವಿ ಪಡೆದು 42 ವರ್ಷ ಕಾಲ ಈ ಸಂಸ್ಥೆಯಲ್ಲಿ ಸೇವೆಸಲ್ಲಿಸಿದ್ದಾರೆ. ಇವರ ಪತ್ನಿ ಶ್ರೀ ಮಾರ್ಪಳ್ಳಿ ಸುಬ್ಬರಾಯರ ಪುತ್ರಿ ಆರುಂಧತಿ, ಪತಿಯ ಸಕಲ ಸತ್ಕಾರ್ಯಗಳಲ್ಲಿಯೂ ಸಹಧರ್ಮಿಣಿಯಾಗಿ ಸಹಕರಿಸುತ್ತಿದ್ದಾರೆ. ಪ್ರಥಮ ಪುತ್ರ ಶ್ರೀ ಆದರ್ಶ ರಾವ್ ಚಾರ್ಟೆಡ್ ಅಕೌಂಟೆಂಟ್ ಆಗಿ ಬೆಂಗಳೂರಿನಲ್ಲಿ ವೃತ್ತಿಯಲ್ಲಿದ್ದಾರೆ. ಅವರ ಪತ್ನಿ ಶ್ರೀಮತಿ ಜಯಾ ಆರ್ಕಿಟೆಕ್ಟ್ ಇಂಜಿಯರ್ ಆಗಿದ್ದಾರೆ. ಇನ್ನೋರ್ವ ಪುತ್ರ ಅನಿಲ್ ಚಂಡೀಗಡದಲ್ಲಿ ಪತ್ನಿ ಸವಿತಾರೊಂದಿಗೆ ನೆಲೆಸಿದ್ದಾರೆ.

ಶ್ರೀ ಗೊವಿಂದ ರಾಯರು ನಮ್ಮ ಸಂಘದ ಆರಂಭದಿಂದಲೂ ಅದರ ಕಾರ್ಯಕರ್ತರಾಗಿದ್ದವರು. ನಮ್ಮ ಸಂಘದ ಸ್ಥಾಪಕ ಸದಸ್ಯರಾದ ಬೈಲಕೆರೆ ನಾರಾಯಣ ರಾವ್‌ರವರ ಸಹೋದರ. ಸಂಘವು ಸ್ಥಳ ಖರೀದಿಸುವಾಗ, ಕಟ್ಟಡ ಕಟ್ಟುವಾಗ, ಅದರ ಸಕಲ ಕಾರ್ಯಚಟುವಟಿಕೆಗಳಲ್ಲಿ ತನು ಮನ ಧನಗಳಿಂದ ಸಹಕರಿಸಿದವರು. ಇವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದರೂ ನಮ್ಮ ಸಂಘದೊಡನೆ ಒಡನಾಟವಿರಿಸಿಕೊಂಡು ಸಂಘ ಹಾಗೂ ಸಮಾಜದ ಮೆಲಿನ ಕಳಕಳಿ ಹಾಗೂ ಪ್ರೀತಿಯಿಂದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಸಹಾಯಮಾಡುವ ನಿಟ್ಟಿನಲ್ಲಿ ದೇಣಿಗೆಯಿತ್ತು ಪ್ರೋತ್ಸಾಹಿಸಿದ್ದನ್ನು ಅಭಿನಂದಿಸುತ್ತಾ ಶ್ರೀ ಶಾರದೆಯು ಶ್ರೀ ಗೋವಿಂದರಾಯರ ಕುಟುಂಬಕ್ಕೆ ಸಕಲ ಇಷ್ಟಾರ್ಥಗಳನ್ನು ದಯಪಾಲಿಸಿ ಸಲಹಲಿ ಎಂದು ಹಾರೈಸುತ್ತೇವೆ.

## ಶ್ರೀ ಶಾರದಾ ದೇವಿಗೆ ಸ್ವರ್ಣಾಭರಣ ಕಾಣಿಕೆ



ಹೆಬ್ಬಾರ್ ಎಂಟರ್‌ಪ್ರೈಸಸ್‌ನ ಮುಖ್ಯಸ್ಥರಾಗಿರುವ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ರಜನಿ ಹೆಬ್ಬಾರ್‌ರವರು ನವರಾತ್ರಿಯ ಸಂದರ್ಭದಲ್ಲಿ ಶ್ರೀಶಾರದಾ ದೇವಿಗೆ ಪುಷ್ಪಾಲಂಕಾರವನ್ನು ಸಮರ್ಪಿಸಿದ್ದಾರೆ.

ಉಡುಪಿ ಕುಂಜಿಬೆಟ್ಟಿನ ನಿವಾಸಿಗಳಾದ ಶ್ರೀಮತಿ ಉಷಾಮೋಹನ್ ದೇವ್ ಹಾಗೂ ಶ್ರೀ ಮೋಹನ್ ದೇವ್ ದಂಪತಿಗಳು ಶ್ರೀ ಶಾರದೆಗೆ ಬಂಗಾರದ ನೆಕ್ಲೆಸನ್ನು ಕಾಣಿಕೆಯಾಗಿ ಸಮರ್ಪಿಸಿದ್ದಾರೆ.

ಉಡುಪಿ ಕುಕ್ಕಿಕಟ್ಟೆಯ ಡಾ। ವಿದ್ಯಾರಾವ್ ಹಾಗೂ ಡಾ। ವೈ. ಸುದರ್ಶನ ರಾವ್ ದಂಪತಿಗಳು ಶ್ರಿ ಶಾರದಾ ದೇವಿಗೆ ಬಂಗಾರದ ಕಡಗವನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಿದ್ದಾರೆ.

ಶ್ರೀ ಶೃಂಗೇರಿ ಜಗದ್ಗುರುಗಳಿಂದ ಪ್ರತಿಷ್ಟಾಪಿತಳಾಗಿ ಕುಂಜಿಬೆಟ್ಟಿನಲ್ಲಿ ನೆಲೆನಿಂತು ನಮ್ಮ ಸಮಾಜಬಾಂಧವವರನ್ನೂ, ಸಕಲಭಕ್ತರನ್ನೂ ರಕ್ಷಿಸಿ ಪೋಷಿಸಿ ಅವರ ಸಕಲ ಇಷ್ಟಾರ್ಥಗಳನ್ನು ನೆರವೇರಿಸಿ ಸಲಹುತ್ತಿರುವ ನಮ್ಮ ಅಧಿದೇವತೆ ಶ್ರಿ ಶಾರದೆಗೆ ನವರಾತ್ರಿಯಂದು ವಿಶೇಷವಾಗಿ ಪ್ರಾರ್ಥನೆ, ಸೇವೆ ಸಲ್ಲಿಸಿದ ಭಕ್ತರ ಕುಂಟುಂಬಕ್ಕೆ ಶ್ರೀ ಶಾರದಾ ಪರಮೇಶ್ವರಿಯು ಅನುಗ್ರಹಿಸಲಿ ಎಂದು ಆಡಳಿತಮಂಡಲಿಯು ಪ್ರಾರ್ಥಿಸುತ್ತದೆ.

## ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಯಾಟಿ(ನಿ) ಉಡುಪಿ ವಾರ್ಷಿಕ ಮಹಾಸಭೆ



ಶ್ರಿ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸ್ಯಾಟಿ(ನಿ) ಉಡುಪಿ ಇದರ 2016-17ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.10-09-2017ನೇ ರವಿವಾರ ಬೆಳಿಗ್ಗೆ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸೊಸ್ಯಾಟಿಯು ಅಧ್ಯಕ್ಷರಾದ ಶ್ರೀ ಕೆ. ವೇಣುಗೋಪಾಲ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಸದಸ್ಯರನ್ನು ಅತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು "ಸತತವಾಗಿ 14ನೇ ವರ್ಷದಲ್ಲಿ ಲಾಭಗಳಿಸುತ್ತಾ ಬಂದಿರುವ ಸಂಸ್ಥೆ, ಹದಿನಾರು ವರ್ಷಗಳ ಸಾರ್ಥಕ ವ್ಯವಹಾರವನ್ನು ಪೂರ್ಣಗೊಳಿಸಿ 17ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ತಮ್ಮೆಲ್ಲರ ಸಹಕಾರ ತುಂಬು ಹೃದಯದ ಪ್ರೋತ್ಸಾಹದಿಂದ ಸಂಘವು ವರದಿ ಸಾಲಿನಲ್ಲಿ ತನ್ನ ವ್ಯವಹಾರದಲ್ಲಿ ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದೆ. ಸಂಘವು ವರದಿ ಸಾಲಿನಲ್ಲಿ ಸದಸ್ಯರಿಂದ ರೂ 25.43 ಲಕ್ಷ ಪಾಲುಬಂಡವಾಳ ಹಾಗೂ ರೂ 12.33 ಕೋಟಿ ಠೇವಣಿ ಸಂಗ್ರಹಿಸಿದೆ. ರೂ 8.94 ಕೋಟಿ ಸಾಲ ನೀಡಿದ್ದು, ರೂ 9.20 ಲಕ್ಷ ನಿವ್ವಳ ಲಾಭಗಳಿಸಿದೆ. ಪ್ರಸಕ್ತ ಸಂಘವು ರೂ 13.04 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸಂಘದ ಸದಸ್ಯರಿಗೆ 10% ಡಿವಿಡೆಂಟ್ ಘೋಷಿಸುತ್ತಿದ್ದೇವೆ" ಎಂದ ಅವರು ಸಂಘದ ಅಭಿವೃದ್ಧಿಗೆ ಸಹಕರಿಸಿದ ಸದಸ್ಯ ಬಾಂಧವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. 2016-17ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ 2016-17ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು ಕಾರ್ಯದರ್ಶಿ ಎನ್.ಪಟ್ಟಾಭಿರಾಮ ರಾವ್‌ರವರು ಸಭೆಯ ಮುಂದಿಟ್ಟರು. ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸಭೆಯು ಕೆಲವು ವಿಷಯಗಳಿಗೆ ಸಮಾಧಾನಕರ ವಿವರಗಳನ್ನು ಪಡೆದು ತನ್ನ ಅಂಗೀಕಾರವನ್ನು ನೀಡಿತು.

2016-2017ನೇ ಸಾಲಿನ ನಿವ್ವಳ ಲಾಭದ ಹಂಚಿಕೆ, 2017-2018ನೇ ಸಾಲಿನ ಅಂದಾಜು ಆಯ ಪಟ್ಟಿ, ಹೆಚ್ಚಾದ ವೆಚ್ಚಗಳ ಪಟ್ಟಿಯನ್ನು ಮಹಾಸಭೆಯು ಅನುಮೋದಿಸಿತು. 2017-2018ನೇ ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ಹೆಬ್ಬಾರ್ ಎಂಡ್ ಎಸೋಸಿಯೇಟ್ಸ್‌ನ ಶ್ರೀ ಕೆ. ಗಣೇಶ್ ಹೆಬ್ಬಾರ್‌ರವರನ್ನು ನೇಮಕ ಮಾಡುವ ಪ್ರಸ್ತಾಪವನ್ನು ಮಹಾಸಭೆಯು ಅಂಗೀಕರಿಸಿತು. ಉಪನಿಬಂಧನೆಗಳಿಗೆ ಸೂಚಿಸಲಾದ ತಿದ್ದುಪಡಿಯ ಪ್ರಸ್ತಾಪವನ್ನು ಸಭೆಯು ಅಂಗೀಕರಿಸಿತು.

ವೇದಿಕೆಯಲ್ಲಿ ಉಪಾಧ್ಯಕ್ಷರಾದ ಯು.ಅರವಿಂದ ಕುಮಾರ್ ಹಾಗೂ ನಿರ್ದೇಶಕರಾದ ಯು.ಪ್ರಫುಲ್ಲಚಂದ್ರ ರಾವ್, ಎಂ.ಸದಾನಂದ ರಾವ್, ವೈ.ಮುರಳೀಕೃಷ್ಣ ರಾವ್, ವೈ.ಪ್ರಕಾಶ್ ಕುಮಾರ್, ವೈ.ಮೋಹನ್ ರಾವ್, ಕೆ.ಮಂಜುನಾಥ ಹೆಬ್ಬಾರ್, ಬಿ. ಜಯರಾಮ ರಾವ್, ಕೃಷ್ಣಕುಮಾರ್ ರಾವ್, ಕೆ.ಗಣೇಶ್ ರಾವ್, ಪಿ.ಪ್ರಭಾಕರ ಭಂಡಿ, ಹರಿಣಾಕ್ಷೀ ಎನ್.ರಾವ್, ಪ್ರೀತಿ ಸಂತೋಷ್ ರಾವ್ ಹಾಗೂ ಸಲಹೆಗಾರರಾದ ಬಿ.ಕೃಷ್ಣಮೂರ್ತಿ ರಾವ್ ಉಪಸ್ಥಿತರಿದ್ದರು.

ಶಾಖಾ ವ್ಯವಸ್ಥಾಪಕರಾದ ಕೆ.ವಿಶ್ವನಾಥ ರಾವ್‌ರವರು ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು.

## ವಿಜಯದಶಮಿ ಆಲ್ಬಂ



ನವರಾತ್ರಿಯಲ್ಲಿ ಶ್ರೀಶಾರದಾ ದೇವಸ್ಥಾನದಲ್ಲಿ ಸ್ವಾಧ್ಯಾಯ ಸಮಿತಿಯವರಿಂದ ಸಪ್ತಶತೀ ಪಾರಾಯಣ



ವಿದ್ಯಾರ್ಥಿ ವೇತನ ನಿಧಿಗೆ ರೂ.1,00,000/- ದೇಣಿಗೆ ನೀಡಿದ ಶ್ರೀ ಬಿ. ಗೋವಿಂದರಾಯರಿಗೆ ಸನ್ಮಾನ



ಸ್ಥಾಪಕ ಸದಸ್ಯರಾದ ಶ್ರೀ ಪಿ.ಗೋಪಿಚಂದ ರಾಯರು ಚಂಡಿಕಾಯಾಗದ ಸಂದರ್ಭದಲ್ಲಿ ಸಂದೇಶ ನೀಡುತ್ತಿರುವುದು.



ಶ್ರೀ ಮೋಹದನ್‌ದೇವ್ ದಂಪತಿಗಳ ಕೊಡುಗೆಗಾಗಿ ಸಂಘದ ವತಿಯಿಂದ ಅಭಿನಂದನೆ

# ದಶಮಾನೋತ್ಸವ ಸಂಭ್ರಮದಲ್ಲಿ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು

## ಕಲಾಪ್ರಕಾರದಲ್ಲಿ ಬದಲಾವಣೆ ಸುಧಾರಣೆಯಾಗಬೇಕು; ಅಂತಸ್ಸತ್ವಕ್ಕೆ ದಕ್ಕೆಯಾಗಬಾರದು : ಎ ಈಶ್ವರಯ್ಯ










ಯಕ್ಷಗಾನವು ಒಂದು ಸಂಪೂರ್ಣ ಕಲೆ, ಇದರಲ್ಲಿ ನೃತ್ಯ, ಗಾಯನ ಮತ್ತು ಮಾತುಗಾರಿಕೆಯ ಹದವಾದ ಮಿಳಿತವಿದೆ. ಹೊಸ ಪೀಳಿಗೆಯ ಮಕ್ಕಳು, ಯುವಕ ಯುವತಿಯರು ಯಕ್ಷಗಾನದ ಪರಂಪರೆಯನ್ನು ವಿಕಾಸದತ್ತ ಮುಂದುವರಿಸಿಕೊಂಡು ಹೋಗಬೇಕೇ ಹೊರತು ವಿನಾಶದತ್ತ ಅಲ್ಲ ಎಂದು ಹಿರಿಯ ಕಲಾವಿಮರ್ಶಕರಾದ ಶ್ರೀ ಎ. ಈಶ್ವರಯ್ಯರವರು ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ತಂಡದ ದಶಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆಯನ್ನು ಸೆಪ್ಟಂಬರ್ 28 ಗುರುವಾರದಂದು ನೇರವೇರಿಸುತ್ತಾ ಮಾತನಾಡಿದರು.

ಯೋಗ ಮತ್ತು ಜಾನಪದ ಕಲೆಗಳು, ಅದರಲ್ಲಿಯೂ ಅತೀ ಮುಖ್ಯವಾಗಿ ಯಕ್ಷಗಾನವನ್ನು ನಮ್ಮ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವುದು ಜಿಲ್ಲಾ ಮಟ್ಟದಲ್ಲಿ ಯೋಜನಾ ಚರ್ಚೆಯಲ್ಲಿ ಬಂದಿದೆ ಎಂದು ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಶ್ರೀ ಎ. ಶ್ರೀನಿವಾಸ ರಾವ್ ಪ್ರಥಮ ದಿನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶ್ರೀ ಗಣೇಶ ರಾವ್, ಕುಂಭಾಶಿ, ಕಾರ್ಯದರ್ಶಿ, ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾ, ಶ್ರೀ ಪ್ರಫುಲ್ಲಚಂದ್ರ ರಾವ್ ಮ್ಹಾಲಕರು, ಭಾರತ್ ಡೆವಲಪರ್ಸ್, ಇವರುಗಳು ಮುಖ್ಯ ಅಭ್ಯಾಗತರಾಗಿ ಮೊದಲನೇ ದಿನ ಸಭೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ಶ್ರೀ ಸಂಜೀವ ಸುವರ್ಣ ಬನ್ನಂಜೆ, ಶ್ರೀ ಕೃಷ್ಣಮೂರ್ತಿ ಭಟ್ ಬಗ್ವಾಡಿ, ಶ್ರೀ ಕೆ. ಶ್ರೀಧರ್ ಹೆಬ್ಬಾರ್ ಬ್ರಹ್ಮಾವರ, ಶ್ರೀ ಚಂದ್ರಕಾಂತ ರಾವ್ ಮೂಡುಬೆಳ್ಳೆ, ಶ್ರೀ ಪ್ರವೀಣ್‌ಕುಮಾರ್, ಶ್ರೀ ರತ್ನಾಕರ ಶೆಣೈ, ಶ್ರೀ ರತ್ನಾಕರ ಆಚಾರ್, ಶ್ರೀ ಗಣೇಶ ಶೆಣೈ ಮತ್ತು ಪ್ರದೀಪ್ ಭಟ್ ಇವರನ್ನು ದಶಮಾನೋತ್ಸವದ ಪ್ರಥಮ ದಿನದ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ನಂತರ ಯಕ್ಷಗಾನ ಕೇಂದ್ರ, ಇಂದ್ರಾಳಿ ಇಲ್ಲಿಯ ವಿದ್ಯಾರ್ಥಿಗಳಿಂದ ಪೂರ್ವರಂಗದ ಕಾರ್ಯಕ್ರಮ ಪ್ರಸ್ತುತಗೊಂಡಿತು. ನಿಲಯ ಕಲಾವಿದರಿಂದ 'ಮೀನಾಕ್ಷಿ ಕಲ್ಯಾಣ' ಎನ್ನುವ ಯಕ್ಷಗಾನ ಪ್ರಸಂಗ ಪ್ರದರ್ಶನಗೊಂಡಿತು.

ಎರಡನೇ ದಿನದ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಂ. ಆರ್. ವಾಸುದೇವ, ಮಾಜಿ ನಿರ್ದೇಶಕರು, ವಿಮಾನ ನಿಲ್ದಾಣ ಪ್ರಾಧಿಕಾರ, ಮಂಗಳೂರು ಇವರು ನೆರವೇರಿಸಿ, ಯಕ್ಷಗಾನ ಹವ್ಯಾಸಿ ತಂಡದ ಸ್ಪೂರ್ತಿಯನ್ನು ನೆನೆಯುತ್ತಾ, ಈ ಯಶಸ್ವೀ ಹತ್ತು ವರ್ಷಗಳ ಸಂಭ್ರಮದ ಹಿಂದೆ ಸರ್ವ ತಂಡದ ಸದಸ್ಯರ ಶ್ರಮ ಇದೆ. ಬಲಿಷ್ಠವಾದ ಧ್ಯೇಯದಿಂದ ಮಾತ್ರವೇ ಇದು ಸಾಧ್ಯ ಎಂದು ಹೇಳಿದರು.

ರಂಗದಲ್ಲಿಯೇ ಯಾವುದೇ ಒಂದು ಪ್ರಭಾವ ಅಥವಾ ಪರಿಕರಗಳು ಇಲ್ಲದೇ ನಿಮ್ಮ ಎದುರು ದೃಶ್ಯವನ್ನು ಅನಾವರಣಗೊಳಿಸುವಂತಹ ಸಾಮರ್ಥ್ಯ ವಿದ್ದರೆ ಅದು ಯಕ್ಷಗಾನ ಕಲೆಗೆ ಮಾತ್ರ ಸಾಧ್ಯ ಎಂದು ಶ್ರೀ ಮನೋಹರ ಪ್ರಸಾದ್, ಸುದ್ಧಿ ವಿಭಾಗ ಮುಖ್ಯಸ್ಥರು, ಉದಯವಾಣಿ, ಮಂಗಳೂರು ಇವರು ದ್ವಿತೀಯ ದಿನದ ಅತಿಥಿಯಾಗಿ ಮಾತನಾಡಿದರು.

ಯಾವ ಜೀವಿಯೂ ಕೂಡಾ ಕಲೆಯನ್ನು ಆಶ್ರಯಿಸಿದರೆ ಅವನ ಬದುಕು ಸುಸಾಂಗವಾಗಿ ಸಾಗುತ್ತಾ ಹೋಗುತ್ತದೆ. ಕಲಾವಿದನೊಬ್ಬ ಸಾಧನೆಯನ್ನು ಮಾಡಿ ಉತ್ತುಂಗಕ್ಕೆ ಏರಿದರೆ ಅದು ಬದುಕಿನ ಸಾರ್ಥಕತೆ ಎಂದು ಎರಡನೇ ದಿನದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ದೇವಾನಂದ ಭಟ್, ಬೆಳುವಾಯಿ, ಮ್ಹಾಲಕರು ಶೋಭಾ ಡಿಜಿಟಲ್ ಸ್ಟುಡಿಯೋ ನುಡಿದರು.

ಡಾ। ಸುದರ್ಶನ ರಾವ್, ಉಪಾಧ್ಯಕ್ಷರು, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು; ಡಾ। ಬಿ. ಕೆ. ಲೋಕೇಶ್ ರಾವ್ , ಸ್ಕಿನ್ ಕ್ಯಾರ್, ಉಡುಪಿ; ಶ್ರೀ ಗಣೇಶ್ ಹೆಬ್ಬಾರ್, ಲೆಕ್ಕ ಪರಿಶೋಧಕರು, ಹೆಬ್ಬಾರ್ ಅಸೋಸಿಯೇಟ್ಸ್, ಉಡುಪಿ; ಉಮೇಶ್ ರಾವ್, ವಿ. ಪಿ. ನಗರ, ನಿವೃತ್ತ ಅಭಿಯಂತರರು, ಪಿಡಬ್ಲ್ಯುಡಿ, ಮಹಾರಾಷ್ಟ್ರ ಮತ್ತು ರಜನಿ ಹೆಬ್ಬಾರ್, ಬಿಜೆಪಿ ಮಹಿಳಾಮೋರ್ಚಾದ ಅಧ್ಯಕ್ಷೆ ಅಭ್ಯಾಗತರಾಗಿ ಉಪಸ್ಥಿತರಿದ್ದರು.

ಶ್ರೀ ಸತೀಶ್ ಕೆದ್ಲಾಯ, ಶ್ರೀ ದೇವದಾಸ ಕೂಡ್ಲಿ, ಶ್ರೀ ಕೆ. ಜೆ. ಗಣೇಶ್, ಶ್ರೀ ಮಂಜುನಾಥ ಕುಲಾಲ್, ಶ್ರೀ ಶಿವಾನಂದ ಕೋಟ, ಶ್ರೀ ಸತೀಶ್ ಉಪಾಧ್ಯಾಯ ಮತ್ತು ಶ್ರೀ ಬಾಲಕೃಷ್ಣ ನಾಯ್ಕ್, ಬ್ರಹ್ಮಾವರ ಇವರನ್ನು ದಶಮಾನೋತ್ಸವದ ದ್ವಿತೀಯ ದಿನದ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ನಿಲಯ ಕಲಾವಿದರಿಂದ 'ವೀರ ಅಭಿಮನ್ಯು' ಎನ್ನುವ ಯಕ್ಷಗಾನ ಪ್ರಸಂಗ ಪ್ರದರ್ಶನಗೊಂಡಿತು.

ಸಮಾರೋಪ ಸಮಾರಂಭದ ಉದ್ಘಾಟನೆಯನ್ನು ಶ್ರೀ ವೈ. ಭುವನೇಂದ್ರ ರಾವ್, ಅಧ್ಯಕ್ಷರು, ಶ್ರಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) , ಕುಂಜಿಬೆಟ್ಟು ಇವರು ನೆರವೇರಿಸಿ, ಸಂಘವನ್ನು ಹುಟ್ಟುಹಾಕುವುದು ಒಂದು ದೊಡ್ಡ ವಿಷಯವಲ್ಲ, ಸಂಘಗಳನ್ನು ಉಳಿಸಿಬೆಳೆಸುವುದು, ಬೆಳೆಸಿ ಉಳಿಸುವುದು ಬಹಳ ಮುಖ್ಯ. ಉಳಿದ ಎಲ್ಲಾ ಸಂಘಕ್ಕಿಂತ ಇದು ಭಿನ್ನ ಯಾಕೆಂದರೆ ಇದು ಕಳೆದ ಹತ್ತು ವರ್ಷಗಳಿಂದ ವಿಶೇಷ ಬೆಳವಣಿಗೆ ಕಂಡಿದೆ ಮತ್ತು ಇನ್ನೂ ಬೆಳೆಯುತ್ತಲೇ ಇದೆ ಎಂದು ಅವರು ನುಡಿದರು.

ಕೆಲವು ವರ್ಷಗಳ ಹಿಂದೆ ಯಕ್ಷಗಾನವು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡ ಸಂದರ್ಭ ಹವ್ಯಾಸಿ ಯಕ್ಷಗಾನ ಕಲಾವಿದರು, ಹವ್ಯಾಸಿ ಯಕ್ಷ ತಂಡದವರು, ಕೆಲವು ದೇವಸ್ಥಾನಗಳು ಯಕ್ಷಗಾನ ಕಲೆಯನ್ನು ಎತ್ತಿ ಹಿಡಿದು ಬೆಳೆಸಿದರು. ಅವಿಭಜಿತ ಜಿಲ್ಲೆಯಲ್ಲಿ ಯಕ್ಷಗಾನಕ್ಕೂ ಕರ್ಣಾಟಕ ಬ್ಯಾಂಕಿಗೂ ಒಂದು ಅವಿನಾಭಾವ ಸಂಬಂಧ ಇದೆ. ನಮ್ಮ ಬ್ಯಾಂಕ್ ನಿರಂತರ ಯಕ್ಷಗಾನವನ್ನು ಪ್ರೋತ್ಸಾಹಿಸುತ್ತಾ ಬಂದಿದೆ ಎಂದು ಕರ್ಣಾಟಕ ಬ್ಯಾಂಕಿನ ಜನರಲ್ ಮ್ಯಾನೇಜರ್ ಬೊಕ್ಕಸ ಚಂದ್ರಶೇಖರ ರಾವ್ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಶ್ರೀ ಟಿ. ರಂಗರಾಯ ಶಾನುಭೋಗ್, ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಡಿ.ಎಂ, ಬೆಂಗಳೂರು; ಶ್ರೀ ಕೆ. ಸುರೇಶ್ ರಾವ್, ಕಾರ್ಯದರ್ಶಿ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಮತ್ತು ಶ್ರೀ ಸಾಂತೂರು ಜನಾರ್ದನ ರಾವ್, ದೇವಿಕೃಪಾ ಏಜೆನ್ಸೀಸ್, ನಂದಿಕೂರು ಇವರು ಅಭ್ಯಾಗತರಾಗಿ ಉಪಸ್ಥಿತರಿದ್ದರು.

ಇಲ್ಲಿಯವರೆಗೆ ಸಂಘಕ್ಕೆ ಯಕ್ಷಗಾನ ಪ್ರದರ್ಶಿಸಲು ಅವಕಾಶವನ್ನಿತ್ತ ವಿವಿಧ ಸಂಘ ಸಂಸ್ಥೆಗಳ, ದೇವಸ್ಥಾನಗಳ ಪದಾಧಿಕಾರಿಗಳಿಗೆ ದಶಮಾನೋತ್ಸವದ ಈ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ತಂಡದ ಸರ್ವ ಕಲಾವಿದರನ್ನು ಸನ್ಮಾನಿಸಲಾಯಿತು. ಸಭಾ ಕಾರ್ಯಕ್ರಮದ ನಂತರ ನಿಲಯ ಕಲಾವಿದರಿಂದ 'ಶನೀಶ್ವರ ಮಹಾತ್ಮೆ' ಎನ್ನುವ ಯಕ್ಷಗಾನ ಪ್ರಸಂಗ ಪ್ರದರ್ಶನಗೊಂಡಿತು.

ಮೂರು ದಿನವೂ ಕಾರ್ಯಕ್ರಮವನ್ನು ಯಕ್ಷ ಪ್ರಾರ್ಥನೆಯೊಂದಿಗೆ ವಿಶಿಷ್ಟವಾಗಿ ಪ್ರಾರಂಭಿಸಲಾಯಿತು. ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರ ತಂಡದ ಅಧ್ಯಕ್ಷರಾದ ಶ್ರೀ ಅರವಿಂದ ಕುಮಾರ್ ಸ್ವಾಗತಿಸಿದರು. ಉಪಾಧ್ಯಕ್ಷರಾದ ಶ್ರೀ ಕೃಷ್ಣಕುಮಾರ್, ಮಟ್ಟು ವಂದಿಸಿದರು. ವೃಂದಾ ಕೃಷ್ಣಕುಮಾರ್, ಮಟ್ಟು ಕಾರ್ಯಕ್ರಮ ನಿರೂಪಣೆ ನೆರವೇರಿಸಿದರು.

With Best Compliments From :




Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org